ಅಧ್ಯಕ್ಷರು : ಗೋವಾದ ಬಗ್ಗೆ ಬಹಳ ಪ್ರೀತಿ ಇದೆ ಅದಕ್ಕೆ ಎತ್ತಿದರು.

ಶ್ರೀ ಧರ್ಮಸಿಂಗ್ : ಸಭಾಧ್ಯಕ್ಷರೆ, ಸ್ವಲ್ಪ ಅವಕಾಶ ಕೊಡಿ. ಗಲಾಟೆ ಮಾಡುವುದು ಬೇಡಿ.

ಅಧ್ಯಕ್ಷರು : ಅದೇನು ಹೇಳಿ.

(ಆ) ವಿಷಯ: ಭಟ್ಕಳದ ಗಲಭೆ ಬಗ್ಗೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸ್ವಲ್ಪ ಅವಕಾಶ ಕೊಡಿ, ಗಲಾಟೆಗೆ ಅವಕಾಶ ಕೊಡಬೇಡಿ, ಪ್ರಮುಖವಾದ ವಿಚಾರಗಳನ್ನು ಹೇಳಬೇಕಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋದಾಗ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಮೊಟ್ಟಮೊದಲನೇಯದಾಗಿ ಭಟ್ಕಳದಲ್ಲಿ ಆದಂಥ ಗಲಭೆಗಳ ಬಗ್ಗೆ ಶ್ರೀಮಾನ್ ದೇಶಪಾಂಡೆಯವರು ಪ್ರಸ್ತಾಪ ಮಾಡಿದರು ನಾನು ಭಾಗವಹಿಸಿದ್ದೆ, ಮಾನ್ಯ ಖರ್ಗೆಯವರು ಕೂಡ ಹೇಳಿದ್ದಾರೆ ಹಾಗೂ ಇತರೆ ವಿರೋಧ ಪಕ್ಷದ ಸದಸ್ಯರು ಕೂಡ ಪ್ರಸ್ತಾಪ ಮಾಡಿದ್ದಾರೆ. ಅವರೇನು ಹೇಳಿದ್ದಾರೆಂದರೆ, ಮುಖ್ಯಮಂತ್ರಿಗಳು ಇರುವುದಿಲ್ಲ ದೆಹಲಿಗೆ ಹೋಗುತ್ತಾರೆ, ಉಪ ಮುಖ್ಯಮಂತ್ರಿಗಳು ಇರುತ್ತಾರೆ ಎಂದರು. ನಾವು ಏನು ಹೇಳಿದೆವು, ಯಾರಾದರೂ ಕೂಡ ಸರ್ಕಾರದ ಪರವಾಗಿ ಉತ್ತರ ಕೊಡತಕ್ಕಂಥ ಹಕ್ಕು ಇದೆ. ಅದರ ಬಗ್ಗೆ ನಮ್ಮ ಆಕ್ಷೇಪಣೆ ಇಲ್ಲ. ತಾವು ಏನು ಹೇಳಿದ್ದೀರಿ, ತಾವೊಂದು ರೀತಿ ಹೇಳಿಕೆ ಅಲ್ಲಿ ಕೊಟ್ಟಿದ್ದೀರಿ, ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ರೀತಿ ಹೇಳಿಕೆ ಕೊಟ್ಟಿದ್ದಾರೆ. ಅದಕ್ಕೆ ಖುದ್ದಾಗಿ ಮುಖ್ಯ ಮಂತ್ರಿಗಳು ಬಂದು ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ನಾವು ಕೇಳಿದ್ದೇವೆ. ಭಟ್ಕಳದಲ್ಲಿ ಗಲಭೆಯಾಯಿತು, ತಾವು ರಾಜ್ಯದ ಮುಖ್ಯಮಂತ್ರಿಗಳಾಗಿದ್ದೀರಿ. ಗೃಹ ಇಲಾಖೆ ತಮ್ಮ ಅಧೀನದಲ್ಲಿ ಇದೆ, ತಾವು ಸದನದಲ್ಲಿ ಬಂದು ಭಟ್ಕಳದ ವಿಚಾರದ ಬಗ್ಗೆ ಒಂದು ಸ್ಪಷ್ಟೀಕರಣ ಹೇಳಿಕೆ ಕೊಡಬೇಕಾಗಿತ್ತು, ಕೊಡಲಿಲ್ಲ. ತದ ನಂತರ ತಾವು ಏನು ಹೇಳಿದಿರಿ, ಉಪ ಮುಖ್ಯಮಂತ್ರಿಗಳು ಕೂಡ ಹೇಳಿದ್ದಾರೆ ಐಎಸ್ಐರವರ ಕೈವಾಡ ಇದೆ, ಈ ತರಹದ ಹೇಳಿಕೆಯನ್ನು ರಾಜ್ಯದ ಉಪ ಮುಖ್ಯಮಂತ್ರಿಗಳು ಕೊಡಬಾರದು. ಅಲ್ಲಿ ಸರಿಯಾದ ರೀತಿಯಲ್ಲಿ ವರದಿ ತರಿಸಿ ಜವಬ್ದಾರಿಯುತವಾದಂಥ ಹೇಳಿಕೆ ಕೊಡಬೇಕು. ತಾವು ಏನು ಹೇಳಿದಿರಿ, "ಕೆಲವು ಭ್ರಷ್ಟ ರಾಜಕಾರಣಿಗಳ ಕೈವಾಡ ಇದೆ". ತಾವು ಸ್ಪಷ್ಟಪಡಿಸಬೇಕು, ಯಾರು ಯಾವ ಪಕ್ಷಕ್ಕೆ ಸಂಬಂಧಪಟ್ಟಿರುವವರು? ಯಾರ ಕೈವಾಡ ಇದೆ? ತಾವು ಇನ್ನೂ ಹೋಗಿಲ್ಲ ಇವತ್ತು ಹೋಗಬೇಕಾಗಿತ್ತು. ಸದನ ಇರುವುದರಿಂದ ತಾವು ಹೋಗಲಿಲ್ಲ. ಅದು ತಮಗೆ ಬಿಟ್ಟಿದ್ದು. ಅಲ್ಲಿ ಆಚಾರ್ಯರವರಿಗೆ ಅವರು ಉಸ್ತುವಾರಿ ಸಚಿವರು ಇದ್ದಾರೆ, ಆಚಾರ್ಯರವರು ಉಡುಪಿ ಬಂದ್ ಮಾಡುತ್ತಾರೆ ಮತ್ತು ಅಲ್ಲಿ ಶಾಂತಿಸ್ಥಾಪನೆಗೆ ಅಲ್ಲಿಗೆ ಹೋಗುತ್ತಾರೆ. ರಾಜ್ಯದ ಜನತೆಗೆ ಸ್ಪಷ್ಟವಾದಂಥ ಅಲ್ಲಿ ಏನು ಆಗುತ್ತಿದೆ ಎಂಬ ಬಗ್ಗೆ ಸ್ಪಷ್ಟವಾದ ಚಿತ್ರಣ ಇಲ್ಲಾ. ಇವತ್ತು ತಾವು ಮತ್ತು ಸಂಘ ಪರಿವಾರದವರು ಕೂಡಿ ಈ ರಾಜ್ಯದಲ್ಲಿ ಆಡಳಿತ

ನಡೆಸುತ್ತಿದ್ದೀರಿ. ಇವತ್ತು ಆ ಭಾಗದಲ್ಲಿ, ಚಿತ್ತರಂಜನ್ ಕಾಲದಲ್ಲಿ ಅವರ ಕೊಲೆಯಾದ ಮೇಲೆ ಸಿಬಿಐಗೆ ವಹಿಸಬೇಕೆಂದಾಗ ವಹಿಸಿದ್ದೇವೆ. ಬಹಳ ದಿವಸಗಳಿಂದ ಅಲ್ಲಿ ಈ ರೀತಿ ಘಟನೆ ನಡೆಯುತ್ತಿದೆ. ಇದು ಸೂಕ್ಷ್ಮವಾದಂಥ ವಿಚಾರ, ಭಟ್ಕಳದಲ್ಲಿ ವಾತಾವರಣ ನಾನು ಬಿಡಿಸಿ ಹೇಳುವುದಕ್ಕಾಗುವುದಿಲ್ಲ. ಆದರೆ ಈ ರೀತಿಯಾಗಿ 29ನೇ ತಾರೀಖು ಘಟನೆ ಆಯಿತು. ಅಲ್ಪಸಂಖ್ಯಾತರ ಮನಸ್ಸಿನಲ್ಲಿ ಬೇರೆ ಬೇರೆ ಜನರಲ್ಲಿ ಕೂಡ ಯಾರು ತಮ್ಮ ಪ್ರತಿನಿಧಿಗಳು ಹೋಗುತ್ತಾರೆ, ಆ ಪ್ರತಿನಿಧಿಗಳಲ್ಲಿ ಹಿಂದಿನ ಘಟನೆಯಿಂದ, ವಿಶ್ವಾಸವಿಲ್ಲ. ಮೊನ್ನೆ ನಾನು ಬಜೆಟ್ ಮೇಲೆ ಭಾಷಣ ಮಾಡತಕ್ಕಂಥ ಕಾಲದಲ್ಲಿ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೇ, ಬಿಜಾಪುರಕ್ಕೆ ರಥಯಾತ್ರೆ ಬರುತ್ತಿದೆ......

ಶ್ರೀ ಆರಗ ಜ್ಞಾನೇಂದ್ರ : ಭಯ ಬೇಡ ಏನು ಆಗಲ್ಲ. ಭಯ ಬೇಡ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ : ಯಾರು ಅಂಜುತ್ತಾರೆ? ಎಲ್ಲಾ ರಥಯಾತ್ರೆ ನೋಡಿದ್ದೇವೆ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಸಂಘ ಪರಿವಾರದವರು ಈ ದೇಶ ಹಾಳು ಮಾಡಿದ್ದಾರೆಯೆ? 50, 55 ವರ್ಷಗಳಿಂದ ಈ ದೇಶವನ್ನು ಆಳಿ, ಅಲ್ಪಸಂಖ್ಯಾತರನ್ನು ಎತ್ತಿ ಕಟ್ಟಿ, ಮೇನ್ ಸ್ಟ್ರೀಮ್‌ನಲ್ಲಿ ಅವರನ್ನು ಬರುವುದಕ್ಕೆ ಬಿಡದೆ, ಹಾಳು ಮಾಡಿದವರು ನೀವು, ಏನು ಅರ್ಥ ಇದು? ಏನು ಆಗುವುದಿಲ್ಲ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ : ಎಲ್ಲಾ ಕಡೆಗೂ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ನಿಮಗೆ ಭಯ ಏಕೆ?

(ಗೊಂದಲ)

ಅಧ್ಯಕ್ಷರು : ಆಯಿತು ಇವರು ಇವರ ಭಾವನೆ ವ್ಯಕ್ತ ಮಾಡಿದ್ದಾರೆ, ಅವರು ಅವರ ಭಾವನೆ ವ್ಯಕ್ತ ಮಾಡಿದ್ದಾರೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ರಥಯಾತ್ರೆ ಅಂದರೆ ಏಕೆ ಭಯ?

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ : ರಥಯಾತ್ರೆ, ಆಯಿತು, ತಿರಂಗಾ ಆಯಿತು.

ಶ್ರೀ ಆರಗ ಜ್ಞಾನೇಂದ್ರ : ನೀವು ಕಾಂಗ್ರೆಸ್‌ನವರು ಇದೇ ರೀತಿ ಹೇಳಿಕೊಂಡು ಬಂದಿರಿ, ವೋಟ್‌ಬ್ಯಾಂಕ್ ರಾಜಕಾರಣ ನಿಮ್ಮದು, ಅಲ್ಪಸಂಖ್ಯಾತರನ್ನು ಎತ್ತಿಕಟ್ಟಿ, ಅವರನ್ನು ನೀವು ಮೇನ್ ಸ್ಟ್ರೀಮ್‌ಗೆ ತರಲಿಕ್ಕೆ ಬಿಡಲಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಜ್ಞಾನೇಂದ್ರರವರೆ ಕುಳಿತುಕೊಳ್ಳಿ ಅವರು ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ಕುಳಿತುಕೊಳ್ಳಿ...

ಶ್ರೀ ಆರಗ ಜ್ಞಾನೇಂದ್ರ : ಬಹಳ ದಿವಸಗಳಿಂದ ಇದನ್ನು ನೀವು ಹೇಳಿ ಈ ದೇಶದಲ್ಲಿ ಅಧಿಕಾರದಲ್ಲಿ ಉಳಿಯಲಿಕ್ಕಾಗುವುದಿಲ್ಲ.

ಶ್ರೀ ಎನ್. ಧರ್ಮಸಿಂಗ್ : ಈಗ ಒಂದು ನಿಮಿಷ. ಮಾನ್ಯ ಮುಖ್ಯಮಂತ್ರಿಗಳೇ ನಾವೇನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ ಆ ಮೂಲಕ ನಿಮಗೆ ಹೆಲ್ಪ್ ಮಾಡುತ್ತಿದ್ದೇವೆ. ಬಹಳ ಎಚ್ಚರಿಕೆ ವಹಿಸಬೇಕೆಂದು ಇವತ್ತಲ್ಲ ಮೊದಲು ಕೂಡ ಹೇಳಿದ್ದೇವೆ. ಒಂದು ಕಾಲ ಬರುತ್ತದೆ, ನೀವು ಹೇಳಿದ್ದು ಕರೆಕ್ಟ್ ಎನ್ನತಕ್ಕಂಥ ರೀತಿಯಲ್ಲಿ ತಮಗೆ ಆ ಭಾವನೆ ಕೂಡ ಬರುತ್ತದೆ. ಇದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು, ಎರಡನೇಯದಾಗಿ ಮಾನ್ಯ ಖರ್ಗೆಯವರು ಹೇಳಿದ ಹಾಗೆ, ತಾವು ದೆಹಲಿಯಲ್ಲಿ ಇದ್ದಿರಿ. ಈದ್ಗಾ ಬಗ್ಗೆ ವಿವಾದ ಏನಿದೆ, ಯಾವ ರೀತಿಯಲ್ಲಿ 1994 ರಲ್ಲಿ ಆಯಿತು ಘಟನೆ, ಎಷ್ಟು ಜನ ಸತ್ತು ಹೋಗಿದ್ದಾರೆ, ಉಮಾ ಭಾರತಿ ತಿರಂಗಾ ಯಾತ್ರೆ ಆಯಿತು, ಈಗ ಉಮಾ ಭಾರತಿ ಅವರನ್ನು ಅವರು ತೆಗೆದುಕೊಳ್ಳುವುದಿಲ್ಲ. ಉಮಾ ಭಾರತಿ ತಿರಂಗಾ ಯಾತ್ರೆ ಹೇಗೆ ಆಯಿತು? ಇವೆಲ್ಲಾ ಘಟನೆ ನಡೆದ ಮೇಲೆ ಹುಬ್ಬಳ್ಳಿ–ಧಾರವಾಡದಲ್ಲಿ ಅಲ್ಪಸಂಖ್ಯಾತರು ಇರುವ ಕಡೆ ಸಾಕಷ್ಟು ಪರಿಸ್ಥಿತಿ ಉದ್ವಿಘ್ನ ವಾತಾವರಣ ಇದೆ. ನಾವು ಕೂಡ ಪ್ರಸ್ತಾಪ ಮಾಡಿದೆವು. ಬ್ಯುಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮಾತನಾಡಿದ ಮೇಲೆ, ಮತ್ತೆ ತಮಗೆ ದೆಹಲಿಯಲ್ಲಿ ಕೂಡ ಸಂಪರ್ಕಿಸಿದ್ದಾರೆ. ಇವತ್ತಿನ ದಿವಸ ಅಫಿಡ್‌ವಿಟ್ ಆಗಬೇಕಾಗಿತ್ತು. ಅಫಿಡ್‌ವಿಟ್ ಸುಪ್ರೀಂ ಕೋರ್ಟಿನಲ್ಲಿ ಏನಾಯಿತು? ಅದರ ಬಗ್ಗೆ ಹೇಳಬೇಕು. ತಾವು ಯಾವಾಗಲೂ ಕೂಡ ರಾಜ್ಯದ ಹಿತದೃಷ್ಟಿಯಿಂದ, ಕಳಸಾ–ಬಂಡೂರಿ ಎಂದು ಹೋಗುತ್ತೀರಿ. ಏನು ಕಳಸಾ–ಬಂಡೂರಿ ತಾವು ಪ್ರಾರಂಭ ಮಾಡಿದಿರಾ? ನಾವು ಮಾಡಿದ್ದೇವೆ. ನಾವು ಹೋಗತಕ್ಕಂಥ ಕಾಲದಲ್ಲಿ ರಾಜ್ಯದ ಎಲ್ಲಾ ವಿರೋಧ ಪಕ್ಷದ ಸದಸ್ಯರನ್ನು ಕರೆದುಕೊಂಡು ಹೋಗಿದ್ದೇನೆ. ಇದು ಕಳಸಾ–ಬಂಡೂರಿ ಕೇವಲ ಮುಖ್ಯಮಂತ್ರಿಗಳ ಬೇರೆ.....

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಭಟ್ಕಳ್‌ದು ಮಾತನಾಡಿಬಿಡಿ. ಎರಡೂ ಮಿಕ್ಸ್ ಮಾಡುವುದು ಬೇಡ.

ಶ್ರೀ ಎನ್. ಧರ್ಮಸಿಂಗ್ : ಇಲ್ಲಾ ಇದರದ್ದು ಹೇಳಿಬಿಡುತ್ತೇನೆ, ರಾಜ್ಯದ ಹಿತದೃಷ್ಟಿಯಿಂದ ಹೋಗತಕ್ಕಂಥ ಪೂರ್ವದಲ್ಲಿ ವಿರೋಧ ಪಕ್ಷದವರೊಡನೆ ಜೊತೆ ಸಮಾಲೋಚನೆ ಮಾಡಬೇಕು. ಕುಡಿಯುವ ನೀರಿನ ಬಗ್ಗೆ, ಈಗ ಅವರೇನು ಹೇಳಿದ್ದಾರೆ, ವಾಟರ್ ಡಿಸ್‌ಪ್ಯೂಟ್‌ಗೆ ಎಂದು ಹೇಳಿ. ತಾವು ಹೇಳುತ್ತೀರಾ ಹೇಳಿ....

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಭಟ್ಕಳ ಘಟನೆ ಏನಿದೆ, ನಾನು ಮೊದಲು ವರದಿಯನ್ನು ಕೊಡುತ್ತೇನೆ. ನಂತರ ಐಎಸ್ಐ ಬಗ್ಗೆ ಉಪ ಮುಖ್ಯಮಂತ್ರಿಗಳು ಹೇಳಿರತಕ್ಕಂಥದ್ದು ಹಾಗೂ ನಾನು ಹೇಳಿರತಕ್ಕಂಥದ್ದರ ಬಗ್ಗೆ ಸ್ಪಷ್ಟೀಕರಣ ಕೊಡುವುದಕ್ಕೆ ತಯಾರಿದ್ದೇನೆ. ಭಟ್ಕಳ ನಗರ ಠಾಣಾ ಸರಹದ್ದಿನ ಮುಗ್ದುಂ ಕಾಲೋನಿಯ ಸೊಸಗಡಿ ಸರ್ವೆ ನಂ. 416ರಲಿ 20 ಗುಂಟೆ ಜಮೀನಿನಲ್ಲಿ ಎ.ಡಿ.ಬಿ. ಯೋಜನೆಯಡಿಯಲ್ಲಿ ಭಟ್ಕಳ ನಗರ ಸಭೆಯವತಿಯಿಂದ ನೀರು ಸರಬರಾಜು ಟ್ಯಾಂಕ್ ಮತ್ತು ಪಂಪ್ ಹೌಸ್ ಅನ್ನು ನಿರ್ಮಿಸಿ ದಿನಾಂಕ: 22–3–06ರಂದು ಅದರ ಸುತ್ತಲು ತಂತಿ ಬೇಲಿಯನ್ನು ಹಾಕಿಸಲು ಪ್ರಾರಂಭಿಸಿರುತ್ತಾರೆ. ಈ ಬೇಲಿಯ ಆವರಣದಲ್ಲಿ ನಾಗಜಟಕೇಶ್ವರ ದೇವರ ಶಿಲಾ ಮೂರ್ತಿಗಳು ಇದ್ದು, ಈ ಶಿಲಾ ಮೂರ್ತಿಗಳಿಗೆ ಸ್ಥಳೀಯ ಹಿಂದೂಗಳು ಪೂಜೆ ಸಲ್ಲಿಸುತ್ತಿದ್ದು, ನಗರ ಸಭೆಯವರು ಬೇಲಿಯ ಒಳಗೆ ಶಿಲಾಮೂರ್ತಿಗಳು ಬರುವಂತೆ ಗೋಡೆ ನಿರ್ಮಿಸಲು ಪಾಯ ತೆಗೆಯಲು ಪ್ರಾರಂಭಿಸಿರುವ ಬಗ್ಗ ಮಾಹಿತಿ ದೊರೆತ ಮೇರೆಗೆ ಸ್ಥಳೀಯ ಪೊಲೀಸರು ಹಾಗೂ ತಹಸೀಲ್ದಾರ್‌ರವರು ದಿ: 22–3–06 ರಂದು ಸ್ಥಳಕ್ಕೆ ಭೇಟಿ ನೀಡಿ ಸ್ಥಳದ ಬಗ್ಗೆ ಸರ್ವೆ ನಡೆಸಿದ ಬಳಿಕ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ತಿಳಿಸಿ ಸದರಿ ಕಾಮಗಾರಿಯನ್ನು ಸ್ಥಗಿತಗೊಳಿಸಿರುತ್ತಾರೆ. ದಿ: 23–3–06ರಂದು ವಿವಾದಿತ ಸ್ಥಳದ ಸರ್ವೆಯನ್ನು ಮಾಡಿಸಿ ನೋಡಿದಾಗ ಶಿಲಾಮೂರ್ತಿಗಳು ನಗರ ಸಭೆಯವರು ನೀರಿನ ಟ್ಯಾಂಕ್ ನಿರ್ಮಿಸಲು ಮಂಜೂರಾದ ಸ್ಥಳದಿಂದ ಸುಮಾರು 15–20 ಮೀಟರ್ ಹೊರಗೆ ಇರುವುದು ಖಚಿತಗೊಂಡ ಕಾರಣ ತಹಸೀಲ್ದಾರ್‌ರವರು ವಿವಾದಿತ ಸ್ಥಳಕ್ಕೆ ಯಾವುದೇ ಅಡಚಣೆ ಮಾಡಬಾರದೆಂದು ತಿಳಿಸಿರುತ್ತಾರೆ. ದಿ: 28–3–06ರಂದು ವಿವಾದಿತ ಸ್ಥಳದಲ್ಲಿ ಹಿಂದೂಗಳು ಶಿಲಾಮೂರ್ತಿಗಳಿದ್ದ ಮರದ ಸುತ್ತಲೂ ಗೋಡೆ ನಿರ್ಮಿಸಲು ಪಾಯ ತೆಗೆಯಲು ಪ್ರಾರಂಭಿಸಿದಾಗ ಕೆಲವು ಸ್ಥಳೀಯ ಮುಸ್ಲಿಮರು ಪ್ರತಿಭಟಿಸಿರುತ್ತಾರೆ. ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ್‌ರವರು ಯಾವುದೆ ಕಾಮಗಾರಿಯನ್ನು ಮಾಡಬಾರದೆಂದು ಯಥಾ ಸ್ಥಿತಿಯನ್ನು ಕಾಪಾಡುವಂತೆ ಎರಡೂ ಕಡೆಯವರಿಗೆ ತಿಳಿಸಿ 31–3–06ರಂದು ಸಭೆಯಲ್ಲಿ ಚರ್ಚಿಸಿ ನಿರ್ಧರಿಸಿದ ಬಳಿಕವೇ ಪ್ರಾರಂಭಿಸಬೇಕೆಂದು ತಿಳಿಸಿದ ಮೇರೆಗೆ ಎರಡೂ ಕಡೆಯವರು ಒಪ್ಪಿಕೊಂಡಿರುತ್ತಾರೆ. ದಿ: 29–3–06ರಂದು ಸೊಸಗಡಿಯ ವಿವಾದಿತ ಸ್ಥಳದಲ್ಲಿದ್ದ ಜಟಕೇಶ್ವರ ಶಿಲಾ ಮೂರ್ತಿಗಳನ್ನು ಯಾರೋ ಕಿತ್ತು ಹೋಗಿರುತ್ತಾರೆಂದು ಹಿಂದೂ ಮತ್ತು ಮುಸ್ಲಿಮರು ಗುಂಪು ಸೇರಿ ಕಲ್ಲು ತೂರಾಟ, ಹಲ್ಲೆ ನಡೆಸಿರುತ್ತಾರೆ. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಹೆಚ್ಚಿನ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಧಾವಿಸಿ, ಪರಿಸ್ಥಿತಿಯನ್ನು ನಿಯಂತ್ರಿಸಲು ಎಲ್ಲಾ ಸೂಕ್ತ ಬಂದೋಬಸ್ತ್ ಮಾಡಿರುತ್ತಾರೆ. ಈ ಸಂಬಂಧ ಭಟ್ಕಳ ನಗರ ಪೊಲೀಸ್ ಠಾಣೆಯಲ್ಲಿ 8 ಪ್ರಕರಣಗಳು ದಾಖಲಾಗಿವೆ ಎಂದು ತಿಳಿದು ಬಂದಿರುತ್ತದೆ. ಪ್ರಕ್ಷುಬ್ಧ ವಾತಾವರಣ ಉಂಟಾದ ಪರಿಣಾಮವಾಗಿ ಭಟ್ಕಳ ನಗರದಲ್ಲಿ 31–3–06ರವರೆಗೆ ಸಿಆರ್‌ಪಿಸಿ ಕಲಂ 144 ರಂತೆ ಪ್ರತಿಬಂಧಕಾಜ್ಞೆಯನ್ನು

ಜಾರಿಗೊಳಿಸಲಾಗಿರುತ್ತದೆ. ದಿ: 29-3-06ರಂದು ಕೆಲಕಾಲ ಪ್ರತಿಬಂಧಕಾಜ್ಞೆ ಸಡಿಲಗೊಳಿಸಲಾಗಿದ್ದು, ಈ ಸಮಯದಲ್ಲಿ ಮೀನು ಮಾರುಕಟ್ಟೆಯ ಸಮೀಪ ಖಲೀಫ್ ಸ್ಟ್ರೀಟ್ ಎಂಬಾತನಿಗೆ ಹಿಂದೂ ಯುವಕನೊಬ್ಬನು ಹಲ್ಲೆ ನಡೆಸಿ ರಕ್ತಗಾಯಗೊಳಿಸಿರುತ್ತಾನೆಂದು ತಿಳಿದು ಬಂದಿರುತ್ತದೆ. ದಿ: 30-3-06ರಂದು ಕೆಲ ಸ್ಥಳೀಯ ಮುಸ್ಲಿಮರು ಭಟ್ಕಳದಲ್ಲಿ ಗಲಾಟೆಯಾಗಿರುವ ಬಗ್ಗೆ ಪ್ರಚಾರ ಮಾಡುತ್ತಾ ಅಂಗಡಿ ಮುಂಗಟ್ಟುಗಳಿಗೆ ಕಲ್ಲು ತೂರಾಟ ನಡೆಸಿ, ಶ್ರೀಧರ್ ಈರಯ್ಯ ಎಂಬಾತನಿಗೆ ಬಾಟಲಿಯಿಂದ ಹೊಡೆದು ಗಾಯಗೊಳಿಸಿದ್ದು, ಇದರಿಂದಾಗಿ ಶ್ರೀಧರ್ ಈರಯ್ಯ ಮರಣ ಹೊಂದಿರುತ್ತಾರೆ. ಈ ಸಂಬಂಧ ಭಟ್ಕಳ ನಗರ ಪೊಲೀಸ್ ಠಾಣೆಯಲ್ಲಿ ಮೊ.ಸಂ. 52-2006, ಕಲಂ 143-147-148-302 ಜೊತೆಗೆ 149 ಐಪಿಸಿ ರೀತ್ಯಾ ಪ್ರಕರಣವು ದಾಖಲಾಗಿರುತ್ತದೆ. ಇದೇ ಸಮಯದಲ್ಲಿ ಮುನೀರ್ ಎಂಬಾತನಿಗೆ ಯಾರೋ ಕೆಲ ಅಪರಿಚಿತರು ಮಾರಕಾಸ್ತ್ರಗಳಿಂದ ಹೊಡೆದು ಹಲ್ಲೆಗೊಳಿಸಿರುತ್ತಾರೆಂದು ತಿಳಿದು ಬಂದಿರುತ್ತದೆ. ಈ ಪ್ರಕರಣದಲ್ಲಿ ಒಬ್ಬ ಆರೋಪಿಯನ್ನು ದಸ್ತಗಿರಿ ಮಾಡಲಾಗಿದೆ. ದಿ: 2-4-06ರಂದು ಪುನಃ ಮೊಹಮ್ಮದ್ ಕಲೀಲ್ ಎಂಬುವವನ ಮೇಲೆ ವೆಂಕಟೇಶ್ ಮತ್ತು ನಾಗೇಶ್ ಎಂಬುವವರು ಹಲ್ಲೆ ನಡೆಸಿದ್ದರಿಂದ ಭಟ್ಕಳ ಠಾಣಾ ಮೊಕದ್ದಮೆ ಸಂಖ್ಯೆ: 58-2006 ಕಲಂ 307, ಜೊತೆಗೆ ಐಪಿಸಿ ಪ್ರಕಾರ ಮೊಕದ್ದಮೆ ದಾಖಲಾಗಿರುತ್ತದೆ ಒಟ್ಟು 14 ಪ್ರಕರಣಗಳಲ್ಲಿ 32 ಮಂದಿಯನ್ನು ದಸ್ತಗಿರಿ ಮಾಡಲಾಗಿದೆ. 9 ಹಿಂದುಗಳು, 23 ಮುಸ್ಲಿಮರು, ಇದರಲ್ಲಿ 13 ಜನ ಮುಸ್ಲಿಮರು ನ್ಯಾಯಾಂಗದ ಬಂಧನದಲ್ಲಿದ್ದು 10 ಜನ ಮುಸ್ಲಿಮರು ಜಾಮೀನಿನ ಮೇಲೆ ಇರುತ್ತಾರೆ, ಮುಂಜಾಗ್ರತೆ ಕ್ರಮಕ್ಕಾಗಿ 8 ಜನ ಹಿಂದೂಗಳನ್ನು 20 ಜನ ಮುಸ್ಲಿಮರನ್ನು ದಸ್ತಗಿರಿ ಮಾಡಲಾಗಿದೆ. ಈ ಘಟನೆಯಲ್ಲಿ ಒಬ್ಬ ಹಿಂದೂ ಮೃತಪಟ್ಟಿದ್ದು ಇಬ್ಬರು ಗಾಯಗೊಂಡಿರುತ್ತಾರೆ ಮತ್ತು ನಾಲ್ಕು ಜನ ಮುಸ್ಲಿಮರು ಗಾಯಗೊಂಡಿರುತ್ತಾರೆ. ಮೃತ ಶ್ರೀಧರ್ ಈರಯ್ಯನವರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ಪರಿಹಾರ ಧನವನ್ನು ನೀಡಲಾಗಿದೆ. ಇದುವರೆವಿಗೆ ನಡೆದ ಘಟನೆಯಲ್ಲಿ ಒಟ್ಟು, 1,00,69,600-00 ರೂ.ಗಳ ಆಸ್ತಿಪಾಸ್ತಿಗೆ ನಷ್ಟ ಉಂಟಾಗಿರುತ್ತದೆ. ಈ ಘಟನೆಯ ಹಿನ್ನೆಲೆಯಲ್ಲಿ ಭಟ್ಕಳ ನಗರಕ್ಕೆ ಶ್ರೀಯುತ ವಿ.ಎಸ್. ಆಚಾರ್ಯ, ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು ಮತ್ತಿತರರು ಭೇಟಿ ನೀಡಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಮನವಿ ಮಾಡಿಕೊಂಡಿರುತ್ತಾರೆ. ಈಗ ಅಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಅಲ್ಲಿ ನಡೆಯುತ್ತಿಲ್ಲ. ಎಲ್ಲವೂ ಕೂಡ ಶಾಂತ ರೀತಿಯಿಂದ ಇದೆ. ಈ ಒಂದು ಭಟ್ಕಳ ಘಟನೆ ಬಗ್ಗೆ ತಾವೇನು ನನ್ನ ಗಮನ ಸೆಳೆದಿದ್ದೀರಿ ಈ ಬಗ್ಗೆ ಒಂದೊಂದು ಪತ್ರಿಕೆಯಲ್ಲಿ ಒಂದೊಂದು ರೀತಿಯ ವರದಿ ಬಂದಿದೆ, ಆ ಬಗ್ಗೆ ಹೇಳುವುದಾದರೆ, ಈದ್ಗಾ ಮೈದಾನದ ವಿಷಯಕ್ಕೆ ಸಂಬಂಧಪಟ್ಟಂತೆ, ಅವತ್ತು ನನಗೆ ಪ್ರಶ್ನೆ ಮಾಡಿರುವುದಕ್ಕೆ ನಾನು ಹೇಳಿಕೆ ಕೊಟ್ಟಿರತಕ್ಕಂಥದು ಒಂದು.....

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮೊದಲು ಭಟ್ಕಳ ಘಟನೆಗೆ ಸಂಬಂಧಪಟ್ಟಂತೆ ಉತ್ತರ ಕೊಡಿ. ಆನಂತರ ಈದ್ಗಾ ವಿಷಯ ಚರ್ಚೆ ಮಾಡೋಣ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಭಟ್ಕಳದಲ್ಲಿ ಈಗ ಶಾಂತ ಪರಿಸ್ಥಿತಿ ಇದೆ.

ಶ್ರೀ ಧರ್ಮಸಿಂಗ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಭಟ್ಕಳದಲ್ಲಿ ಈಗ ಪರಿಸ್ಥಿತಿ ಶಾಂತವಾಗಿದೆ. ಅಲ್ಲಿಗೆ ಈಗ ಎಲ್ಲ ಪೊಲೀಸ್ ಅಧಿಕಾರಿಗಳು ಹೋಗಿದ್ದಾರೆ. ಮತ್ತೆ ಎಲ್ಲಾ ಪಾರ್ಟಿಯವರು ಕೂಡ ಶಾಂತ ರೀತಿಯಲ್ಲಿ ಹೋಗಬೇಕೆಂದು ತಾವು ಹೇಳಿಕೆ ಕೊಟ್ಟಿದ್ದೀರಿ. ತಾವು ಇದರ ಬಗ್ಗೆ ಹೇಳಿಕೆ ಕೊಡಬೇಕೆಂದು ನಾವು ಏಕೆ ಕೇಳಿದ್ದೇವೆಂದರೆ, "ಭಟ್ಕಳದ ಗಲಭೆಯಲ್ಲಿ ಕೆಲವು ಭ್ರಷ್ಟರಾಜಕಾರಣಿಗಳ ಕೈವಾಡ ಇದೆ" ಎಂದು ತಾವು ಹೇಳಿದ್ದೀರಿ. ಆದ್ದರಿಂದ ಇದರ ಬಗ್ಗೆ ತಾವು ಸ್ಪಷ್ಟಪಡಿಸಬೇಕು. ಮತ್ತೆ ಎರಡನೆಯದಾಗಿ ಇದರಲ್ಲಿ ಐಎಸ್ಐ ಕೈವಾಡ ಇದೆ ಎಂದು ಸಹ ಹೇಳಿದ್ದಾರೆ. ಮೊನ್ನೆ ದಿವಸ ಬೆಂಗಳೂರಿನಲ್ಲಿಯೂ ಕೂಡ ಒಂದು ಘಟನೆ ನಡೆಯಿತು. ಈಗ ರೆಹಮಾನ್ ಎಂಬುವವರನ್ನು ಹಿಡಿದುಕೊಂಡು ಬಂದಿದ್ದಾರೆ. ಏನಾಗುತ್ತದೆಂದು ಗೊತ್ತಿಲ್ಲ. ಯಾವಾಗಲು ಕೂಡ ಈ ರಾಜ್ಯದ ಮುಖ್ಯಮಂತ್ರಿಗಳು ಈ ರೀತಿಯಾಗಿ ಹೇಳಿಕೆ ಕೊಟ್ಟಿಲ್ಲ. ಇವೆಲ್ಲ ಪೊಲೀಸ್ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥದು. ಅಲ್ಲಿ ಏನು ಇಲ್ಲದೆ ಇದ್ದರೂ ಕೂಡ ಅಲ್ಲಿಗೆ ಮಾನ್ಯ ಆಚಾರ್ಯರವರು ಮತ್ತು ಮಾನ್ಯ ಯಡಿಯೂರಪ್ಪನವರು ಹೋಗಿ ಈ ಒಂದು ಘಟನೆಗೆ ಐಎಸ್ಐ ಕೈವಾಡ ಇದೆ ಎಂದು ಹೇಳಿದ್ದಾರೆ. ಭ್ರಷ್ಟ ರಾಜಕಾರಣಿಗಳ ಕೈವಾಡ ಇದೆ ಎಂದು ತಾವು ಹೇಳಿದ್ದೀರಿ. ಆದ್ದರಿಂದ ಇದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮತ್ತೆ ಭಟ್ಕಳದಲ್ಲಿ ಶಾಂತ ವಾತಾವರಣ ನಿರ್ಮಾಣ ಆಗುತ್ತಿದೆ ಎಂದು ಹೇಳಿದ್ದಾರೆ. ಇದು ನಿಜ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಎರಡು–ಮೂರು ಪ್ರಶ್ನೆಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ತಾವು ಕೂಡ ತಮ್ಮ ಉತ್ತರದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೀರಿ. ಘಟನಾ ಸ್ಥಳಕ್ಕೆ ಅಧಿಕಾರಿಗಳು ಹೋಗಿ ದಿನಾಂಕ 31–3–2006ರವರೆಗೆ ಯಾರ ಮೇಲೆ ಏನು ಕ್ರಮ ತೆಗೆದುಕೊಳ್ಳಬಾರದು ಸ್ಟೇಟಸ್ಕೋ ಇರಬೇಕೆಂದು ಹೇಳಿರತಕ್ಕಂಥದು ಸಹ ನಿಜ. ಆದರೆ, ಅಲ್ಲಿ 28ನೇ ತಾರೀಖು ರಾತ್ರಿ ವಿಗ್ರಹಗಳು ನಾಪತ್ತೆ ಆಗಿವೆ. ಆದರೆ, 20ನೇ ಮಾರ್ಚ್‌ನಿಂದ ಇದರ ಬಗ್ಗೆ ಮಾತುಕತೆ ನಡೆಯುತ್ತಿದೆ, ಬಾಯಿ ಬಾಯಿ ಜಗಳಗಳು ಕೂಡ ಆಗಿವೆ. ಪೊಲೀಸ್‌ನವರು ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಅಲ್ಲಿಗೆ ಹಲವಾರು ಬಾರಿ ಭೇಟಿ ಕೊಟ್ಟಿದ್ದಾರೆ. ಅಲ್ಲಿ ಸೆಕ್ಯುರಿಟಿ ಹಾಕಬೇಕೆಂದು ತಹಶಿಲ್ದಾರವರು 22ನೇ ತಾರೀಖಿನ ದಿವಸ ಅಲ್ಲಿನ ಪೊಲೀಸ್‌ನವರಿಗೆ ಹೇಳಿದ್ದರು. 22ನೇ ತಾರೀಖಿನ ದಿವಸ ಸೆಕ್ಯುರಿಟಿ ಹಾಕದೇ 20ನೇ ತಾರೀಕಿನ ದಿವಸ ಸೆಕ್ಯುರಿಟಿ ಅಲ್ಲಿ ಹಾಕಿದ್ದರೆ ಇವತ್ತಿನ ದಿವಸ

ಆ ವಿಗ್ರಹಗಳು ನಾಪತ್ತೆ ಆಗತಕ್ಕಂಥ ಪ್ರಶ್ನೆಯೇ ಇರುತ್ತಿರಲಿಲ್ಲ. ವಿಗ್ರಹಗಳು ನಾಪತ್ತೆಯಾದ ಸಂಶಯದಿಂದ ಗಲಾಟೆಯಾಗಿ ಈ ಒಂದು ಪರಿಸ್ಥಿತಿ ನಿರ್ಮಾಣವಾಗುವುದಕ್ಕೆ ಕಾರಣವಾಯಿತು. ಆದ್ದರಿಂದ, ಇದರ ಜವಾಬ್ದಾರಿ ಯಾರು ತೆಗೆದುಕೊಳ್ಳಬೇಕಾಗುತ್ತದೆ? ಸರ್ಕಾರವೇ ಇದರ ಜವಾಬ್ದಾರಿ ತೆಗೆದುಕೊಳ್ಳಬೇಕಾಗುತ್ತದೆ. ಸೆಕ್ಯುರಿಟಿ ಅಲ್ಲಿ ಏಕೆ ಲ್ಯಾಪ್ಸ್ ಆಯಿತು? ಏತಕ್ಕಾಗಿ ಅಲ್ಲಿ ಸೆಕ್ಯುರಿಟಿ ಹಾಕಲಿಲ್ಲ? ಆದ್ದರಿಂದ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಎರಡನೇ ಪ್ರಶ್ನೆ ಏನೆಂದರೆ ಮಾನ್ಯ ಉಪ ಮುಖ್ಯಮಂತ್ರಿಗಳು "ಇದರಲ್ಲಿ ಐಎಸ್ಐ ಕೈವಾಡ ಇದೆ" ಎಂದು ಮಂಗಳೂರಿನಲ್ಲಿ ಹೇಳಿದರು. ಆದರೆ, ತಾವು ಏನು ಹೇಳಿದಿರೆಂದರೆ "ನನ್ನ ಹೊಸ ಸರ್ಕಾರ ಬಂದಿದೆ. ಆದ್ದರಿಂದ ನನ್ನ ಸರ್ಕಾರಕ್ಕೆ ಕೆಟ್ಟ ಹೆಸರು ತರುವುದಕ್ಕೆ ಒಂದು ಪ್ರಯತ್ನ ನಡೆಯುತ್ತಿದೆ" ಎಂದು ಹೇಳಿದ್ದೀರಿ. ತಾವು ಹೇಳಿರತಕ್ಕಂಥದು ಉದಯ ಟಿ.ವಿ.ಯಲ್ಲಿ ಬಂದಿದೆ ಮತ್ತೆ ಪತ್ರಿಕೆಯಲ್ಲಿ ಕೂಡ ಬಂದಿದೆ. ಪತ್ರಿಕೆ ಕಳುಹಿಸಿಕೊಡಿ ಎಂದರೆ ನಾನು ಖಂಡಿತ ಪತ್ರಿಕೆಯನ್ನು ಕಳುಹಿಸಿಕೊಡುತ್ತೇನೆ. ಇವತ್ತು ಭಟ್ಕಳ ಬಹಳ ಸೆನ್ಸಿಟಿವ್ ಏರಿಯಾ. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಿದೆ. ಆದ್ದರಿಂದ ತಮ್ಮ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ. ಇವತ್ತು ಏನಾಗಿದೆ ಎಂದರೆ ಬಿಜೆಪಿ ಮತ್ತು ಜೆಡಿ (ಎಸ್) ಸರ್ಕಾರ ಬಂದ ನಂತರ ಒಂದು ರೀತಿಯ ಸಂದೇಹ ಮತ್ತು ಸಂಶಯ ಈ ರಾಜ್ಯದ ಅಲ್ಪಸಂಖ್ಯಾತರು ಮತ್ತು ಹಿಂದುಳಿದ ಜನಾಂಗದವರಲ್ಲಿ ಮೂಡಿದೆ. ಅಂದರೆ, ನಿಮ್ಮಿಂದ ನಮಗೆ ಭದ್ರತೆ ಸಿಗುವುದಿಲ್ಲವೆಂದು ತಿಳಿದುಕೊಂಡಿದ್ದಾರೆ. ಈ ರೀತಿಯಾದ ಘಟನೆಗಳು ಆದಂಥ ಸಂದರ್ಭದಲ್ಲಿ ನಿಮ್ಮ ಮಂತ್ರಿಮಂಡಲದಲ್ಲಿರತಕ್ಕಂಥವರು ಯಾರಾದರು ಹೇಳಿಕೆ ಕೊಡುವಾಗ ಬಹಳ ಜವಾಬ್ದಾರಿಯಿಂದ ಹೇಳಬೇಕಾಗುತ್ತದೆ. ಗೌರವಾನ್ವಿತ ಉಪ ಮುಖ್ಯಮಂತ್ರಿಗಳು ಐಎಸ್ಐ ಕೈವಾಡ ಇದೆ ಎಂದು ಹೇಳಿದ್ದಾರೆ. "ನನ್ನ ಸರ್ಕಾರಕ್ಕೆ ಕೆಟ್ಟ ಹೆಸರು ತರುವುದಕ್ಕೆ ಪ್ರಯತ್ನ ನಡೆಯುತ್ತಿದೆ" ಎಂದು ತಾವು ಹೇಳಿದ್ದೀರಿ. ಆದ್ದರಿಂದ ನಮಗೆ ಇದರ ಬಗ್ಗೆ ಸ್ಪಷ್ಟೀಕರಣ ಬೇಕಾಗಿದೆ. ಗೃಹ ಇಲಾಖೆಯ ಜವಾಬ್ದಾರಿ ತಮ್ಮ ಕೈಯಲ್ಲಿದೆ. ಆದ್ದರಿಂದ ಇದರಲ್ಲಿ ಐಎಸ್ಐ ಕೈವಾಡ ಇದೆಯೇ ಎನ್ನತಕ್ಕಂಥದ್ದು ನಮಗೆ ಸ್ಪಷ್ಟವಾಗಬೇಕಾಗಿದೆ. ಇಲ್ಲದಿದ್ದರೆ ಮಾನ್ಯ ಉಪ ಮುಖ್ಯಮಂತ್ರಿಗಳು ಆ ರೀತಿಯ ಸ್ಟೇಟ್‌ಮೆಂಟ್ ಏಕೆ ಕೊಟ್ಟರು? ಎನ್ನತಕ್ಕಂಥದ್ದು ಇವತ್ತು ಗೊತ್ತಾಗಬೇಕಾಗುತ್ತದೆ. ಮೂರನೇ ಪ್ರಶ್ನೆ ಏನೆಂದರೆ, ಜಿಲ್ಲಾ ಮಂತ್ರಿಗಳಾಗಿರತಕ್ಕಂಥ ಮಾನ್ಯ ಆಚಾರ್ಯರವರು ಅಲ್ಲಿಗೆ ಹೋಗಿರುವುದರ ಬಗ್ಗೆ ಹೇಳುವುದಾದರೆ, 29ನೇ ತಾರೀಖಿನ ದಿವಸ ಮೊದಲನೇ ಘಟನೆ ಆಗಿರತಕ್ಕಂಥದರ ಬಗ್ಗೆ ತಾವು ಕೂಡ ಒಪ್ಪಿಕೊಳ್ಳುತ್ತೀರಿ. ಆದರೆ, ಅವರು 31ನೇ ತಾರೀಖಿನ ದಿವಸ 12.45 ಗಂಟೆಗೆ ಅಲ್ಲಿಗೆ ಹೋಗಿ, 1 ಗಂಟೆ 15 ನಿಮಿಷ ಅವರು ಅಲ್ಲಿದ್ದರು. ಆ ಸಂದರ್ಭದಲ್ಲಿ ಅವರ ಕೆಲವು ಸ್ನೇಹಿತರು ಮತ್ತು ಕೆಲವು ಅಧಿಕಾರಿಗಳು ಒಂದೆರಡು ಘಟನಾ ಸ್ಥಳಗಳಿಗೆ ಭೇಟಿ ಕೊಟ್ಟು ವಾಪಸ್ಸು ಅವರು ಬಂದುಬಿಟ್ಟರು. ಮತ್ತೆ ಆ ದಿನ ಉಡುಪಿಯಲ್ಲಿ ಬಂದ್ ಆಗಿತ್ತು. ಯಾರು ಅಲ್ಲಿ ಬಂದ್‌ಗೆ ಕಾಲ್ ಕೊಟ್ಟರು?

ಅಲ್ಲಿ ಬಂದ್‌ಗೆ ವಿರೋಧಪಕ್ಷದವರು ಕೊಟ್ಟರೆ ಅಥವಾ ಕಾಂಗ್ರೆಸ್ ಪಕ್ಷದವರು ಅಥವಾ ಬೇರೆ ಪಾರ್ಟಿಯವರು ಕೊಟ್ಟರೆ? ನಿಮ್ಮ ಸ್ನೇಹಿತರು ಬಂದ್‌ಗೆ ಕಾಲ್ ಕೊಟ್ಟರು. ಆ ದಿನ ಮಕ್ಕಳಿಗೆ ಪರೀಕ್ಷೆ ನಡೆಯುತ್ತಿತ್ತು. ಇದರಿಂದ ಎಷ್ಟು ಅನಾಹುತ ಆಯಿತ್ತೆಂದರೆ, ತಿಂಗಳ ಲಾಸ್ಟ್ ದಿನ ಆಗಿರುವುದರಿಂದ ಟ್ರೆಷರಿಯಲ್ಲಿ ಎನ್‌ಕ್ಯಾಷ್‌ಮೆಂಟ್‌ಗಾಗಿ ತೊಂದರೆ ಆಯಿತು. ಮತ್ತೆ ಬ್ಯಾಂಕ್‌ಗೆ ಮತ್ತೆ ಇತರೇ ಅನಾಹುತಗಳು ಆಯಿತು. ನಿಮ್ಮ ಸರ್ಕಾರದಲ್ಲಿರತಕ್ಕಂಥ ಜವಾಬ್ದಾರಿ ವ್ಯಕ್ತಿಗಳು ಉಡುಪಿಯಲ್ಲಿ ಬಂದ್‌ಗೆ ಕಾಲ್ ಕೊಟ್ಟರು. ಆದ್ದರಿಂದ ಭಟ್ಕಳ ಘಟನೆಗೂ ಉಡುಪಿ ಬಂದ್ ಮಾಡುವುದಕ್ಕೆ ಏನು ಸಂಬಂಧ ಇದೆ? ಆದ್ದರಿಂದ ಇದರ ಬಗ್ಗೆ ತಾವು ಬಹಳ ಕಠೋರವಾದಂಥ ಕ್ರಮಗಳನ್ನು ಇವತ್ತು ತೆಗೆದುಕೊಳ್ಳದಿದ್ದರೆ ನಾಳೆ ದಿವಸ ನಿಮಗೆ ತೊಂದರೆಯಾಗಬಹುದೆಂದು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಮತ್ತೆ ಇದರಿಂದ ಸರ್ಕಾರಕ್ಕೂ ಕೂಡ ತೊಂದರೆಯಾಗಬಹುದು. ಆದ್ದರಿಂದ ಯಾರು ಜವಾಬ್ದಾರಿ ಸ್ಥಾನದಲ್ಲಿರುತ್ತಾರೆ ಅವರು ಬಹಳ ಜವಾಬ್ದಾರಿಯಿಂದ ವರ್ತನೆ ಮಾಡಬೇಕಾಗುತ್ತದೆ. ವ್ಯಕ್ತಿಗತವಾಗಿ ಅವರ ಮೇಲೆ ನಮಗೆ ಗೌರವ ಇರಬಹುದು. ಆದರೆ ಇರತಕ್ಕಂಥ ಪ್ರಶ್ನೆ ಏನೆಂದರೆ, ಆಡಳಿತ ಮಾಡತಕ್ಕಂಥ ಒಬ್ಬ ಜಿಲ್ಲಾ ಮಂತ್ರಿಗಳು ಭಟ್ಕಳಕ್ಕೆ ಹೋಗುತ್ತಾರೆ. ಮತ್ತೆ ಅದೇ ದಿನ ಅವರ ಜಿಲ್ಲೆಯಲ್ಲಿ, ಅವರೇ ಜಿಲ್ಲಾ ಮಂತ್ರಿ, ಬಂದ್‌ಗೆ ಕಾಲ್ ಮಾಡಿದ್ದಾರೆ. ಅವತ್ತು ಇದ್ದಂಥ ಪರೀಕ್ಷೆಯಲ್ಲಿ ಎಷ್ಟು ವಿದ್ಯಾರ್ಥಿಗಳು ಆಬ್ಸೆಂಟ್ ಆಗಿದ್ದಾರೆ ಎನ್ನತಕ್ಕಂಥದರ ಬಗ್ಗೆ ರಿಪೋರ್ಟ್ ತರಿಸಿ. ಅಲ್ಲಿ ಏನೇನು ಆಗಿದೆ ಎನ್ನತಕ್ಕಂಥದ್ದು ಗೊತ್ತಾಗುತ್ತದೆ. ಮತ್ತೆ ಕೊನೆಯಲ್ಲಿ ತಾವು ಉತ್ತರ ಕೊಡುವಾಗ ಅಲ್ಲಿ ಕೊಲೆಯಾಗಿರತಕ್ಕಂಥ ವ್ಯಕ್ತಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಕೊಡುತ್ತೇವೆಂಬ ಮಾತನ್ನು ಹೇಳಿದ್ದೀರಿ. ನಾನು ಸಹ ಇದರ ಬಗ್ಗೆ ಒಂದು ಮಾತನ್ನು ಹಿಂದೆ ಹೇಳಿದ್ದೆ. ಬಹಳ ಜನ ಅಲ್ಲಿ ಇಂಜ್ಯೂರ್ಡ್ ಆಗಿದ್ದಾರೆ. ಮುನೀರ್ ಎಂಬ ವ್ಯಕ್ತಿ ಕೂಡ ಇಂಜ್ಯೂರ್ಡ್ ಆಗಿದ್ದಾರೆಂದು ತಾವು ಹೇಳಿದ್ದೀರಿ. ಅವನು ಕುಂದಾಪುರದಲ್ಲಿ ಟ್ರೀಟ್‌ಮೆಂಟ್ ತೆಗೆದುಕೊಳ್ಳುವುದಕ್ಕೆ ಹೋದಾಗ ಡಾಕ್ಟರ್‌ರವರು ಆತನಿಗೆ ಥ್ರೆಟನ್ ಮಾಡಿದ್ದಾರೆ. ಆತನಿಗೆ ಟ್ರೀಟ್‌ಮೆಂಟ್ ಕೊಡಬಾರದೆಂದು ಹೇಳಿದ್ದಾರೆ. ಆತನನ್ನು ಅಂಬ್ಯುಲೆನ್ಸ್‌ನಲ್ಲಿ ತೆಗೆದುಕೊಂಡು ಹೋಗುವಾಗ ಸೂರತ್‌ಕಲ್‌ನ ಒಂದು ಹಳ್ಳಿ ಹತ್ತಿರ ಅಂಬ್ಯುಲೆನ್ಸ್ ಮೇಲೆ ಕಲ್ಲು ತೂರಾಟ ಆಗಿದೆ. ಅದರ ಬಗ್ಗೆ ತಾವು ಏನು ಹೇಳಿಲ್ಲ. ಆತ ಈಗ ಮಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದಾನೆ. ಆದ್ದರಿಂದ ಆತ ಇಂಜ್ಯೂರ್ಡ್ ಆಗಿರುವುದರಿಂದ ಆತನಿಗೆ ಪರಿಹಾರ ಕೊಡಬೇಕಾಗುತ್ತದೆ. ಯಾರು ಇವತ್ತು ಕೊಲೆಯಾಗಿದ್ದಾನೆ ಆತನಿಗೆ 1 ಲಕ್ಷ ಪರಿಹಾರ ಕೊಟ್ಟಿದ್ದೀರಿ. 1993ರಲ್ಲಿಯೆ ನಾವು ಇಂಥ ಸಂದರ್ಭದಲ್ಲಿ ಒಂದು ಲಕ್ಷ ಪರಿಹಾರ ಕೊಡುತ್ತಿದ್ದೆವು. ಅಷ್ಟನ್ನೆ ತಾವು ಕೊಟ್ಟಿದ್ದೀರಿ. ಆದ್ದರಿಂದ ಈಗ ಕೊಡುತ್ತಿರುವ ಪರಿಹಾರವನ್ನು ಜಾಸ್ತಿ ಮಾಡಬೇಕೆಂದು ನಾನು ಹೇಳಿದ್ದೇನೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆ ಸರ್ಕಾರದ ಕಡೆಯಿಂದ ಬರಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ರಘುಪತಿಭಟ್ (ಉಡುಪಿ) : ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ಇದರ ಬಗ್ಗೆ ಮಾತನಾಡುತ್ತಿರುವ ಸಂದರ್ಭದಲ್ಲಿ ಉಡುಪಿ ಬಂದ್‌ಗೂ ಮತ್ತು ನಮ್ಮ ಉಸ್ತುವಾರಿ ಸಚಿವ ರಾಗಿರತಕ್ಕಂಥ ಡಾ: ಆಚಾರ್ಯರವರಿಗೆ ಸಂಬಂಧವನ್ನು ಕಲ್ಪಿಸಿಕೊಡತಕ್ಕಂಥದನ್ನು ನಾವು ಹಿರಿಯ ನಾಯಕರು ಮಾಡಿರತಕ್ಕಂಥದನ್ನು ನಾನು ಕೇಳಿದ್ದೇನೆ. ಆದರೆ ಮೊನ್ನೆ ದಿವಸ ನಾನು ಮಾತನಾಡುವುದಕ್ಕೆ ತಾವು ಅವಕಾಶ ಕೊಡಲಿಲ್ಲ. ಆದರೆ ಇವತ್ತು ನಾನು ಸತ್ಯ ಸಂಗತಿಯನ್ನು ಹೇಳುವುದಕ್ಕೆ ಬಯಸುತ್ತೇನೆ. ಅಲ್ಲಿ ಬಂದ್ ಕಾಲ್ ಕೊಟ್ಟಿರತಕ್ಕಂಥದಕ್ಕೆ ಬಿಜೆಪಿ ಅಥವಾ ಸಂಘ ಪರಿವಾರಕ್ಕೂ ಯಾವುದೇ ಸಂಬಂಧವಿಲ್ಲ. ಬೇರೆ ಬೇರೆ ಹಿಂದೂ ಸಂಘಟನೆಗಳು ಬಂದ್‌ಗೆ ಕಾಲ್ ಕೊಟ್ಟಿರಬಹುದು. ವಿಶ್ವಹಿಂದು ಪರಿಷತ್ ಮತ್ತು ಬಜರಂಗದಳ ಈ ಬಂದ್‌ಗೂ ನಮಗೂ ಯಾವುದೇ ಸಂಬಂಧವಿಲ್ಲವೆಂದು ನೇರವಾಗಿ ಪತ್ರಿಕೆಗಳಲ್ಲಿ ಹೇಳಿವೆ. ಭಾರತೀಯ ಜನತಾ ಪಕ್ಷದ ಅಂದರೆ ಆ ಜಿಲ್ಲೆಯ ಎಲ್ಲ ಶಾಸಕರುಗಳು ಪತ್ರಿಕೆಗಳಲ್ಲಿ ಮತ್ತು ಟಿ.ವಿ. ಯಲ್ಲಿ ಹೇಳಿರತಕ್ಕಂಥದು ಏನೆಂದರೆ "ಈ ಬಂದ್‌ನ್ನು ಆಚರಣೆ ಮಾಡುವುದಕ್ಕೆ ನಮ್ಮ ಬೆಂಬಲ ಇಲ್ಲ" ಎಂದು ಹೇಳಿದ್ದಾರೆ. ಆದರೆ ಕೆಲವು ಸಂಘಟನೆಗಳು ಅಂದರೆ ಸಂಘ ಪರಿವಾರಕ್ಕೆ ಸಂಬಂಧ ಪಡದೆ ಇರತಕ್ಕಂಥ ಸಂಘಟನೆಗಳು ಬಂದ್‌ನು ಅಲ್ಲಿ ಆಚರಿಸಿದರು. ಆದ್ದರಿಂದ ಇದಕ್ಕೂ ಡಾ: ಆಚಾರ್ಯರವರ ಸಂಬಂಧವಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಆಯಿತಾ? ಸಾಕು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ರಘುಪತಿ ಭಟ್ : ಒಂದು ನಿಮಿಷ. ನನಗೆ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಇಲ್ಲಿ ಸಂಬಂಧಪಡದೆ ಇರತಕ್ಕಂಥವರೆಲ್ಲ ಮಾತನಾಡುತ್ತಾರೆ. ಅವರು ಅದೇ ಕ್ಷೇತ್ರವಾಗಿರುವುದರಿಂದ ಅವರಿಗೆ ತಾವು ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಕೆ. ರಘುಪತಿ ಭಟ್ : ನನಗೆ ಎರಡು ನಿಮಿಷ ಅವಕಾಶ ಕೊಡಿ. ನಾನು ಈಗ ಹೇಳುವುದೇನೆಂದರೆ, ಆ ದಿವಸ ಪಿ.ಯು.ಸಿ. ಪರೀಕ್ಷೆ ಬರೆಯಲು ವಿದ್ಯಾರ್ಥಿಗಳಿಗೆ ತೊಂದರೆ ಆಗಿದೆ ಎಂದು ಹೇಳಿದ್ದಾರೆ. ಆ ದಿವಸ ಉಡುಪಿಯಲ್ಲಿ 100 ಪರ್ಸೆಂಟ್ ಅಟೆಂಡೆನ್ಸ್ ಆಗಿದೆ. ಯಾವುದೇ ರೀತಿಯ ತೊಂದರೆ ಆಗಿಲ್ಲ. ತಾವು ರಿಪೋರ್ಟ್ ತರಿಸಿ ನೋಡಬಹುದು.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಅಧ್ಯಕ್ಷರೆ, ಮತ್ತೊಂದು ಸಾರಿ ಇದರ ಬಗ್ಗೆ ಚರ್ಚೆ ಮಾಡಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇವರು ಹೇಗೆ ಉತ್ತರ ಕೊಡುತ್ತಾರೆ. ನಾವು ಮಾನ್ಯ ಮುಖ್ಯಮಂತ್ರಿಯವರಿಗೆ ಪ್ರಶ್ನೆ ಕೇಳಿದ್ದೇವೆ. ಆದ್ದರಿಂದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕು.

ಶ್ರೀ ಕೆ. ರಘುಪತಿ ಭಟ್ : ಎಲ್ಲರೂ ಮಾತನಾಡುತ್ತಾರೆ. ನಾನು ಕೇಳುವ ಹಾಗೆ ಇಲ್ಲವೆ? ನಾನು ಈ ಸದನದ ಸದಸ್ಯನಲ್ಲವೆ. ಆದ್ದರಿಂದ ನಾನೇಕೆ ಇಲ್ಲಿ ಮಾತನಾಡಬಾರದು? ಪ್ರತಿಯೊಬ್ಬರು ಎದ್ದು ನಿಂತು ಮಾತನಾಡುತ್ತಾರೆ. ನಾನು ಮಾತನಾಡಬಾರದೆ? ಮಾನ್ಯ ಅಧ್ಯಕ್ಷರೆ ನಾನು ಮಾತನಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಡಾ: ಆಚಾರ್ಯರವರು ಬಂದು ಬೇಕಾದರೆ ಹೇಳಲಿ. ಏಕೆಂದರೆ ಅವರೂ ಕೂಡ ಮಂತ್ರಿಯಾಗಿದ್ದಾರೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಕೂಡ ಆಗಿದ್ದಾರೆ. ಆದ್ದರಿಂದ ಅವರು ಉತ್ತರ ಕೊಡಲಿ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಅವರೇಕೆ ಮಾತನಾಡಬಾರದು? ಅವರು ಉಡುಪಿ ಕ್ಷೇತ್ರದ ಶಾಸಕರಾಗಿದ್ದಾರೆ. ಆದ್ದರಿಂದ ಅವರೂ ಕೂಡ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕಾಗುತ್ತದೆ. ಉಡುಪಿ ಬಂದ್ ಬಗ್ಗೆ ಆರೋಪ ಮಾಡುತ್ತಿದ್ದರೂ ಆದ್ದರಿಂದ, ಅವರು ಕೇಳಬಾರದೆ? ಸಂಬಂಧವಿಲ್ಲದೆ ಇರತಕ್ಕಂಥವರೆಲ್ಲರೂ ಇಲ್ಲಿ ಮಾತನಾಡುತ್ತಿದ್ದಾರೆ. ಅವರು ಮಾತನಾಡುವುದು ಬೇಡವೇ?

(ಗೊಂದಲ)

ಅಧ್ಯಕ್ಷರು : ಕೇಳಿ ಸ್ವಾಮಿ, ವಿರೋಧ ಪಕ್ಷದ ನಾಯಕರು ಏನು ಹೇಳುತ್ತಿದ್ದಾರೆಂದರೆ, ಎಲ್ಲರೂ ಅವರವರ ಭಾವನೆಯನ್ನು ವ್ಯಕ್ತ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಅವತ್ತು ಎಲ್ಲಾ ಏನು ಹೇಳಬೇಕು ಹೇಳಿದ್ದೇವೆ, ಚರ್ಚೆಯಾಗಿದೆ. ಈಗ ಉತ್ತರ ಹೇಳಬೇಕಾದದ್ದು ಮಾನ್ಯ ಮುಖ್ಯಮಂತ್ರಿಗಳು ಅವರು ಉತ್ತರವನ್ನು ಹೇಳಲಿ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಉತ್ತರವನ್ನು ಹೇಳಲಿ ಸಾರ್. ಸ್ವಲ್ಪ ಇರಿ, ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತಿದ್ದೇನೆಂದರೆ, ಇಲ್ಲಿ ವಿಚಾರ ಬರುತ್ತಿರುವಂಥ ಸಂದರ್ಭದಲ್ಲಿ ಸಂಘ ಪರಿವಾರವನ್ನು ತರುತ್ತಿದ್ದಾರೆ. ಡಾ: ವಿ.ಎಸ್. ಆಚಾರ್ಯರವರು ಜಿಲ್ಲಾ ಉಸ್ತುವಾರಿ ಸಚಿವರು, ಅದು ಹೌದು. ಉಸ್ತುವಾರಿ ಸಚಿವರಾಗಿ ಅಲ್ಲಿ ಹೋಗಿ ಬಂದಿದ್ದಾರೆ. ಅವರು ಉಡುಪಿಗೆ ಬಂದಿದ್ದಾರೆ. ಶಿವಮೊಗ್ಗದಲ್ಲಿ ನಾನು ಇದ್ದೇನೆ. ಬಂದ ಕರೆ ಕೊಡುವುದಕ್ಕೆ ನನ್ನ ಪರ್ಮಿಷನ್ ತೆಗೆದುಕೊಳ್ಳಬೇಕು ಏನು? ಬೇಕಾದಷ್ಟು ಸಂಘ ಸಂಸ್ಥೆಗಳವರು ಇದ್ದಾರೆ. ದೇಶಪಾಂಡೆಯವರೆ ಸ್ವಲ್ಪ ತಡೆಯಿರಿ, ನೀವು ಮಾತನಾಡುವುದನ್ನು ನಾನು ಕೇಳಿದ್ದೇನೋ ಇಲ್ಲವೋ? ರಘುಪತಿ ಭಟ್‌ರು ಏನು ಹೇಳುತ್ತಿದ್ದಾರೆ, ಅವರು ಉಡುಪಿ ಕ್ಷೇತ್ರದ ಶಾಸಕರು. ಅಲ್ಲಿರುವ ಯಾವುದೋ ಸಂಘಟನೆಯವರು ಬಂದ್‌ಗೆ ಕರೆ ಕೊಟ್ಟರು. ಇವರು ಹೇಳುತ್ತಿರುವುದು ಏನು? ಉಸ್ತುವಾರಿ ಸಚಿವರು ಉಡುಪಿಯವರು ಇಲ್ಲಿ ಬಂದ್‌ಗೆ ಕರೆ ಕೊಟ್ಟರು, ಅಲ್ಲಿಗೆ ಹೋಗಿ ಬಂದರು. ನಾನು ನಮ್ಮ ಹಿರಿಯರಾದ ದೇಶಪಾಂಡೆಯವರಿಗೆ ಹೇಳುತ್ತಿದ್ದೇನೆಂದರೆ, ಅಲ್ಲಿ ಏನು ನಡೆದಿದೆ, ಇಲ್ಲಿ ದಯವಿಟ್ಟು ರಾಜಕಾರಣವನ್ನು ಬೆರೆಸಬೇಡಿ ಎಂದು ನನ್ನ ಪ್ರಶ್ನೆ. ಸ್ವಲ್ಪ ಕೇಳಿ, ನಾನು ಹೇಳುವುದನ್ನು

ಕೇಳಿ ಸರ್, ಸರ್ ಅವರು ಮಾತನಾಡಬೇಕಾದರೆ ನಾನು ಸುಮ್ಮನೆ ಇದ್ದನೋ ಇಲ್ಲವೋ? ಅವರು ಹೇಳುವುದಕ್ಕೆ ಹೊರಟಿರುವುದು ಇಷ್ಟೇನೆ.

(ಗೊಂದಲ)

ಯಾರೋ ಬಂದ್‌ಗೆ ಕಾಲ್ ಕೊಟ್ಟಿದ್ದಾರೆ. ಅವರು ಉಡುಪಿ ಕ್ಷೇತ್ರದವರಾದರು ಕೂಡ ಉಸ್ತುವಾರಿ ಸಚಿವರು ಅಲ್ಲಿಗೆ ಹೋಗಿ ಬಿಟ್ಟು ಬಂದಿದ್ದಾರೆ. ದಯವಿಟ್ಟು ಇದಕ್ಕೂ ಭಾರತೀಯ ಜನತಾ ಪಕ್ಷಕ್ಕೂ, ಸಂಘ ಪರಿವಾರಕ್ಕೂ ಸಂಬಂಧ ತರುವ ಪ್ರಯತ್ನವನ್ನು ಮಾಡಬೇಡಿ, ಇದು ಅವರ ಮನವಿ, ಇದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಆರ್.ಎಸ್.ಎಸ್. ವಿಶ್ವ ಹಿಂದೂ ಪರಿಷತ್, ಸಂಘ ಪರಿವಾರಕ್ಕೆ ಸಂಬಂಧವಿಲ್ಲವೆಂದು ಸ್ಪಷ್ಟವಾಗಿ ಹೇಳಬಿಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಸ್ವಲ್ಪ ತಡೆಯಿರಿ. ಸರ್ ನಾನು ತುಂಬಾ ಸ್ಪಷ್ಟವಾಗಿ ಹೇಳುತ್ತೇನೆ. ನಾನು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ವಯಂ ಸೇವಕ. ರಕ್ತ ರಕ್ತದಲ್ಲೂ ಕೂಡ ನಾನು ಸಂಘ ಪರಿವಾರದವನೆ. ನಾನು ಹೇಳುವುದಕ್ಕೆ ಹೊರಟಿರುವುದು ಏನೆಂದರೆ, ಸಂಘ ಪರಿವಾರಕ್ಕೂ ಈ ಬಂದ್‌ಗೂ ಸಂಬಂಧವನ್ನು ತರಬೇಡಿ.

ಶ್ರೀ ಆರ್.ವಿ. ದೇಶಪಾಂಡೆ : ಕೇಂದ್ರದಲ್ಲಿ ಸರ್ಕಾರ ಹೋಗಿದ್ದು ಇದೇ Dual Membershipನಿಂದ ಗೊತ್ತೇನು.....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅದಕ್ಕಾಗಿಯೆ ನಾನು ಹೇಳುವುದಕ್ಕೆ ಹೊರಟಿರುವುದು. ಇಲ್ಲಿ ರಾಜಕೀಯವನ್ನು ಮಾಡುವುದಕ್ಕೆ ಹೋಗಬೇಡಿ.

ಶ್ರೀ ಧರ್ಮಸಿಂಗ್ : ದೇವರ ಕೃಪೆಯಿಂದ ಅಧಿಕಾರ ತಮ್ಮ ಕೈಯಲ್ಲಿ ಸಿಕ್ಕಿದೆ, ಸರಿಯಾದ ರೀತಿಯಲ್ಲಿ ಸರ್ಕಾರವನ್ನು ನಡೆಸಿಕೊಂಡು ಹೋಗಿ. ಆರ್.ಎಸ್.ಎಸ್. ನವರು ನಿಮಗೆ ಕೆಟ್ಟ ಹೆಸರನ್ನು ತರುತ್ತಾರೆ. ಏಕೆ ನೀವು ಅವರ ಜೊತೆಯಲ್ಲಿ ಹೋಗಿದ್ದೀರಿ, ನಿಮಗೆ ಅವರು ಕೆಟ್ಟ ಹೆಸರು ತರುತ್ತಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ತಾವು ಮುಖ್ಯ ಮಂತ್ರಿಗಳಾಗಿದ್ದವರು, ನಮಗೆ ಮಾರ್ಗದರ್ಶನ ಮಾಡಬೇಕಾದರೆ, ಸರ್ಕಾರ ತುಂಬಾ ಚೆನ್ನಾಗಿ ನಡೆಸಿಕೊಂಡು ಹೋಗಿ ಎಂದು ಹೇಳಬೇಕಾದರೆ, ನೀವು ಎಷ್ಟರಮಟ್ಟಿಗೆ ನಡೆಸಿಕೊಂಡು ಹೋಗಿದ್ದೀರಿ. ನಿಮ್ಮ ಸ್ಥಿತಿ ನೋಡಿ ನಮಗೆ ಮಾರ್ಗದರ್ಶನ ಮಾಡಿದ್ದರೆ ಬಹಳ ಚೆನ್ನಾಗಿತ್ತು. ನೀವು ಕಳೆದುಕೊಂಡು ನನಗೆ ಮಾರ್ಗದರ್ಶನ ಮಾಡುವುದಕ್ಕೆ ಬಂದಿದ್ದೀರಿ. ನಿಮ್ಮ ಸರ್ಕಾರ ಹಿಂದೆ ಮಾಡಿದಾಗ ಸಂಪೂರ್ಣವಾಗಿ ವಿಫಲರಾಗಿರುವುದರಿಂದ ನೀವು ಅಲ್ಲಿ ಕುಳಿತುಕೊಂಡಿದ್ದೀರಿ. ನಿಮಗೆ ಮಾರ್ಗದರ್ಶನ ಮಾಡುವ ಹಕ್ಕೆ ಇಲ್ಲ. ನಾನು ಅದಕ್ಕೋಸ್ಕರ ಹೇಳುವುದಕ್ಕೆ ಹೊರಟಿರುವುದು. ನೀವು ನನಗೇನು ಮಾರ್ಗದರ್ಶನ ಮಾಡಬೇಡಿ, ವಿರೋಧ ಪಕ್ಷದಲ್ಲಿದ್ದೀರಿ, ವಿರೋಧ ಪಕ್ಷದವರು ಏನು ಮಾಡಬೇಕು ಅದನ್ನು ಮಾಡಿ.

ಶ್ರೀ ಧರ್ಮಸಿಂಗ್ : ಮುಖ್ಯಮಂತ್ರಿಯವರಿಗೆ, ಸಂಘ ಪರಿವಾರದವರ ಕಾರ್ಯಕ್ರಮ ಏನು ಇದೆ ಅದರ ಬಗ್ಗೆ ಹೇಳಿದ್ದೇನೆ......

ಅಧ್ಯಕ್ಷರು : ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾರೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ರಘುಪತಿ ಭಟ್‌ರವರು ಏನೋ ಹೇಳುತ್ತಾರೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನಾನೆ ಹೇಳುತ್ತೇನೆ ಬಿಡಿ.

ಅಧ್ಯಕ್ಷರು : ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ, ಕುಳಿತುಕೊಳ್ಳಿ.

(ಗೊಂದಲ)

ರೋಷನ್‌ಬೇಗ್‌ರವರೆ ನೀವು ಎದ್ದು ನಿಂತುಕೊಂಡರೆ, ಮತ್ತೆ ಅವರು ಎದ್ದು ನಿಂತುಕೊಳ್ಳುತ್ತಾರೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇವರಿಗೆ ಅವಕಾಶವನ್ನು ಕೊಟ್ಟರೆ ಅವರಿಗೂ ಅವಕಾಶವನ್ನು ಕೊಡಿ. ಇವರಿಗೆ ಅವಕಾಶ ಕೊಡಿ ನಾವು ಬೇಡ ಎನ್ನುವುದಿಲ್ಲ. ಉಡುಪಿ ಶಾಸಕರಿಗೂ ಅವಕಾಶವನ್ನು ಕೊಡಿ.

(ಗೊಂದಲ)

ಅವರು ಕೂಡ ಜನರಿಂದ ಗೆದ್ದು ಬಂದಿದ್ದಾರೆ. ಇವರಿಗೆ ಅವಕಾಶ, ಅವರಿಗೆ ಅವಕಾಶ ಇಲ್ಲವೇನು?

ಅಧ್ಯಕ್ಷರು : ದಯಮಾಡಿ ಎಲ್ಲರೂ ಕೂಡಿ. ಚರ್ಚೆ ಎಲ್ಲಾ ಆಗಿ ಮುಕ್ತಾಯವಾಗಿ ಹೋಗಿಬಿಟ್ಟಿದೆ. ಈಗ ಯಾವುದಕ್ಕೂ ಅವಕಾಶ ಇಲ್ಲ, ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಅಗತ್ಯವಿದ್ದರೆ ಒಂದೆರಡು ಕ್ಲಾರಿಫಿಕೇಶನ್ ಕೇಳಬಹುದು. ದಯಮಾಡಿ ಕುಳಿತುಕೊಳ್ಳಿ. ಆ ಮೇಲೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ವಿರೋಧ ಪಕ್ಷದ ನಾಯಕರು, ಜಿಲ್ಲಾ ಉಸ್ತುವಾರಿ ಸಚಿವರು ಉಡುಪಿ ಬಂದ್‌ಗೆ ಕರೆ ಕೊಟ್ಟರು. ಮೃತರಾದವರ ಮನೆಗೆ ಹೋಗಿದ್ದಾರೆನ್ನುವ ಮಾತನ್ನು ಇಲ್ಲಿ ಹೇಳಿದ್ದಾರೆ. ನನಗೆ ಉಸ್ತುವಾರಿ ಸಚಿವರು ಮಾತನಾಡಿದರು. ಉಡುಪಿ ಶಾಸಕರಾದ ರಘುಪತಿ ಭಟ್‌ರವರು ಚರ್ಚೆ ಮಾಡಿ "ನಾವು ಬಂದನ್ನು ಏನಾದರೂ ಪ್ರಯತ್ನ ಮಾಡಿ ನಿಲ್ಲಿಸುವ ಪ್ರಯತ್ನ ಮಾಡುತ್ತಿದ್ದೇವೆ" ಎಂದು ನನ್ನ ಗಮನಕ್ಕೆ ತಂದರು. ನಾನು ಅವತ್ತು ಹಬ್ಬದ ದಿವಸ ಮಾತನಾಡಿದಾಗ, ನಾನು ಆ ಘಟನೆ ನಡೆದ ಸ್ಥಳಕ್ಕೆ ಹೋಗಿ ಎಂದು ನಾನು ಹೇಳಿದ್ದೆ, ಅಲ್ಲಿಯ ಪರಿಸ್ಥಿತಿಯನ್ನು ತಿಳಿದು ಮತ್ತೆ ನನಗೆ ತಮ್ಮ ಕಡೆಯಿಂದ ಒಂದು ವರದಿಯನ್ನು ಕೊಡಿ ಎಂದು ಹೇಳಿದ್ದೆ. ಇವತ್ತು ಅವರ ಕಡೆಯಿಂದ ಬಂದ್‌ಗೆ ಕರೆ ಕೊಟ್ಟಂಥದ್ದು ಅಲ್ಲವೆಂದು ನಾನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಅಲ್ಲಿಯ ಸಾರ್ವಜನಿಕರು ಬಂದ್‌ಗೆ ಕರೆ ಕೊಟ್ಟಿದ್ದಾರೆ. ಅದಕ್ಕೆ ಉಸ್ತುವಾರಿ ಸಚಿವರು ಕಾರಣ ಕರ್ತರು ಅಲ್ಲ. ಈ ಘಟನೆಗಳ ವಿಷಯದಲ್ಲಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಏನೊಂದು ಮಾತನ್ನು ಹೇಳುತ್ತಿದ್ದಾರೆ, ಭಟ್ಕಳ ವಿಷಯದಲ್ಲಿ ಕೆಟ್ಟ ರಾಜಕಾರಣಿಗಳ ಒಂದು ಚಿತಾವಣೆಯಿಂದ ಆ ಘಟನೆ ಆಗಿದೆ ಎನ್ನುವುದನ್ನು ನಾನು ಹೇಳಿದ್ದೇನೆಂದು ಅವರು ಹೇಳಿದ್ದಾರೆ. ಒಂದು ಕಡೆ ಉಪ ಮುಖ್ಯಮಂತ್ರಿಗಳು ಇದು ಐಎಸ್‌ಐ ಚಟುವಟಿಕೆಯಿಂದ ಆಗಿರುವಂಥದ್ದು ಎಂದು ಹೇಳಿ, ಅವರು ಹೇಳಿಕೆಯನ್ನು ಕೊಟ್ಟಿದ್ದಾರೆಂದು ಹೇಳಿ, ಇದರ ವಿಷಯದಲ್ಲಿ ತಾವು ಸ್ಪಷ್ಟೀಕರಣವನ್ನು ಏನು ಕೇಳುತ್ತಿದ್ದೀರಿ. ನಾನು ಅವತ್ತು ಬೆಂಗಳೂರಿನಲ್ಲಿ ಹೇಳಿಕೆಯನ್ನು ಕೊಟ್ಟಿರತಕ್ಕಂಥದ್ದು ಕೆಲವು ಪತ್ರಿಕೆಗಳಲ್ಲಿ ವರದಿಯಾಗಿರುವುದು ಒಂದು ತರಹ ಇದೆ, ಇನ್ನೊಂದರಲ್ಲಿ ಇನ್ನೊಂದು ತರಹ ಇದೆ, ಎರಡನ್ನೂ ನಾನು ನಿಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಾನು ಈದ್ಗಾ ಸಮಸ್ಯೆ ಬಗ್ಗೆ ಅವತ್ತು ಪತ್ರಿಕಾ ಸ್ನೇಹಿತರು ನನ್ನನ್ನು ಪ್ರಶ್ನೆ ಮಾಡಿದಾಗ ನಾನು ಇವತ್ತಿನ ಸರ್ಕಾರದ ಬಗ್ಗೆ ಅಂತ ಹೇಳಲಿಲ್ಲ. ಇವತ್ತಿನ ಸರ್ಕಾರದ ಬಗ್ಗೆ ಕೆಟ್ಟ ಹೆಸರು ಬರಲಿಕ್ಕೆ ರಾಜಕೀಯ ಮಾಡುತ್ತಿದ್ದಾರೆನ್ನುವ ಪದವನ್ನು ಬಳಸಿಲ್ಲ. ನಾನು ಹೇಳಿದ್ದು ಈದ್ಗಾ ಸಮಸ್ಯೆ : ಇವತ್ತು ನಮ್ಮ ಒಂದು ಸ್ವಾರ್ಥಕ್ಕೋಸ್ಕರವಾಗಿ ರಾಜಕೀಯವಾಗಿ ಬಳಕೆ ಮಾಡಿಕೊಂಡಿದ್ದೇವೆ ಎನ್ನುವುದನ್ನು ಹೇಳಿದ್ದೇನೆ. ಭಟ್ಕಳ ವಿಷಯದಲ್ಲಿ ಅವತ್ತು ನಾನು ಹೇಳಿಕೆಯನ್ನು ಕೊಟ್ಟಿಲ್ಲ. ಉದಯವಾಣಿ ಪತ್ರಿಕೆಯಲ್ಲಿ ಬಂದಿರತಕ್ಕಂಥ ವರದಿ ಒಂದು, "ಹುಬ್ಬಳ್ಳಿ ಈದ್ಗಾ ಮೈದಾನ ವಿವಾದಕ್ಕೆ ರಾಜಕಾರಣಿಗಳ ಸ್ವಾರ್ಥವೆ ಕಾರಣ ಎಂದು ಮುಖ್ಯಮಂತ್ರಿ ಕುಮಾರಸ್ವಾಮಿ ಇಂದು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದರು. ರಾಜಕಾರಣಿಗಳು ಸ್ವಾರ್ಥ ಸಾಧನೆಗಾಗಿ ಇಂತಹ ವಿವಾದಗಳನ್ನು ಜೀವಂತ ಇಡಲು ಯತ್ನಿಸುತ್ತಾರೆ. ಇದರಿಂದ ಅಮಾಯಕ ಜನರು ತೊಂದರೆ ಅನುಭವಿಸುತ್ತಾರೆಂದು ಆತಂಕ ವ್ಯಕ್ತಪಡಿಸಿದರು." ಈ ರೀತಿ ಪತ್ರಿಕೆಯಲ್ಲಿ ಬಂದಿದೆ. ಇನ್ನು ಕನ್ನಡ ಪ್ರಭದಲ್ಲಿ "ಐಎಸ್‌ಐ ತಾಣ ಡಿಸಿಎಂ ರಾಜಕೀಯ ಪ್ರೇರಿತ ಸಿಎಂ. ಇನ್ನು ಉದ್ರಿಕ್ತ ನಿಷೇದಾಜ್ಞೆ." ನಮ್ಮ ಉಪ ಮುಖ್ಯಮಂತ್ರಿಗಳು ಹೇಳಿರತಕ್ಕಂಥದ್ದು "ಶ್ರೀಕೃಷ್ಣ ಮಠಕ್ಕೆ ಭೇಟಿ ನೀಡಿದ್ದ ಯಡಿಯೂರಪ್ಪ ಸುದ್ದಿಗಾರರೊಂದಿಗೆ ಮಾತನಾಡಿ ಕರ್ನಾಟಕ–ಪಾಕಿಸ್ತಾನ ಗೂಢಚರ್ಯೆ ಸಂಘಟನೆ ಐಎಸ್‌ಐ ಚಟುವಟಿಕೆಗಳ ತಾಣವಾಗುತ್ತಿದೆ. ಈ ಬಗ್ಗೆ ಗುಪ್ತಚರ ಇಲಾಖೆ ಸರ್ಕಾರಕ್ಕೆ ವರದಿ ನೀಡಿರುವುದು". ಅವರು ಕೊಟ್ಟಿರುವಂಥದ್ದು ಭಟ್ಕಳ ವಿಷಯದಲ್ಲಿ ಐಎಸ್‌ಐ ಕೈವಾಡವಿದೆ ಎಂದು ಅವರು ಹೇಳಿರುವಂಥದ್ದು ಅಲ್ಲ. ಇದು ಇಡೀ ದೇಶದಲ್ಲಿ ಏನು ಐಎಸ್‌ಐ ಚಟುವಟಿಕೆಗಳು ಪ್ರಾರಂಭವಾಗಿದೆ ಎನ್ನುವುದರ ಬಗ್ಗೆ ಕೇಂದ್ರ ಸರ್ಕಾರ ಮಾಹಿತಿ ಕೊಟ್ಟಿರತಕ್ಕಂಥದ್ದನ್ನು ಅವರು ಇಲ್ಲಿ ಉಲ್ಲೇಖ ಮಾಡಿದ್ದಾರೆ. ಭಟ್ಕಳ ಘಟನೆಗೆ ಸಂಬಂಧಪಟ್ಟಂತೆ ಅವರು ಹೇಳಿರತಕ್ಕಂಥದ್ದಲ್ಲ. ಹಾಗೂ ಈ ಒಂದು ಪತ್ರಿಕೆಯಲ್ಲಿಯೆ ನನ್ನ ಹೇಳಿಕೆ, ರಾಜಕೀಯ ಪ್ರೇರಿತ ಆದರೆ, "ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿಯವರು ಬೆಂಗಳೂರಿನಲ್ಲಿ

ಭಾನುವಾರ ಪೋಲೀಸ್ ದಿನಾಚರಣೆಯಲ್ಲಿ ಮಾತನಾಡಿ ಭಟ್ಕಳ ಗಲಭೆ ಸೇರಿದಂತೆ ರಾಜ್ಯದಲ್ಲಿ ನಡೆಯುತ್ತಿರುವ ಎಲ್ಲಾ ಸಮಸ್ಯೆಗಳು ರಾಜಕೀಯ ಪ್ರೇರಿತವಾಗಿವೆ. ಈ ಘಟನೆಗಳ ಹಿಂದೆ ಬೇರೆ ಶಕ್ತಿ ಕುತಂತ್ರ ಇಲ್ಲವೆಂದು" ನಾನು ಹೇಳಿದ್ದೇನೆಂದು ಬಂದಿದೆ. ಇನ್ನೊಂದು ಪತ್ರಿಕೆಯಲ್ಲಿಯೂ ವರದಿ ಇದೆ. "ಸುಪ್ರೀಂಕೋರ್ಟಿಗೆ ಪ್ರಮಾಣ ಪತ್ರ ಸಲ್ಲಿಸುವ ವಿಚಾರದಲ್ಲಿ ಸರ್ಕಾರ ಇದುವರೆಗೆ ಯಾವ ತೀರ್ಮಾನವನ್ನು ಕೈಗೊಂಡಿಲ್ಲ, ಈದ್ಗಾ ಗಲಭೆ ಒಂದು ರಾಜಕೀಯ ಪ್ರೇರಿತ ಘಟನೆ". ಇದು ಇನ್ನೊಂದು ಪತ್ರಿಕೆಯ ಹೇಳಿಕೆ, ಭಟ್ಕಳ ವಿಚಾರದಲ್ಲಿ ರಾಜಕಾರಣಿಗಳ ಕೈವಾಡ ಇದೆ ಎಂದು ನಾನು ಹೇಳಿಲ್ಲ. ಈದ್ಗಾ ವಿಷಯದ ಬಗ್ಗೆ ಅವರು ಪ್ರಶ್ನೆ ಮಾಡಿದಾಗ ನಾನು ಹೇಳಿರುವಂಥದ್ದು ವಿಷಯ ಅದು. ಆಮೇಲೆ ಇವತ್ತಿನ ಪ್ರಸ್ತುತ ಸರ್ಕಾರದ ವಿಚಾರದಲ್ಲಿ ರಾಜಕೀಯ ಶಕ್ತಿಗಳು ಕೆಲಸ ಮಾಡುತ್ತಿವೆ ಎನ್ನುವ ಪದವನ್ನು ನಾನು ಬಳಸಿಲ್ಲ. ಅದಕ್ಕೆ ನಾನು ಸ್ಪಷ್ಟೀಕರಣವನ್ನು ಕೊಡುತ್ತೇನೆ. ಭಟ್ಕಳ ವಿಷಯದಲ್ಲಿ ನಿಮಗೆ ಹೇಳಬೇಕೆನ್ನುವುದಾದರೆ ಈ ಸಮ್ಮಿಶ್ರ ಸರ್ಕಾರದ ವಿಷಯದಲ್ಲಿ ಈ ಎರಡು ಪಕ್ಷಗಳ ಸರ್ಕಾರ ಪ್ರಾರಂಭವಾದ ನಂತರ ಮುಂದಿನ ದಿನಗಳು ಕಷ್ಟ ಎಂದು ತಾವು ಹೇಳುತ್ತಿದ್ದೀರಿ. ಈ ಘಟನೆ ನಡೆದ ಕೇವಲ 5–6 ದಿವಸಗಳಲ್ಲಿ ಅಲ್ಲಿ ಸಂಪೂರ್ಣ ಶಾಂತಿಯನ್ನು ತರುವಂಥದ್ದಕ್ಕೆ ಈ ಸರ್ಕಾರದಿಂದ ಸ್ಪಂದಿಸಿದ್ದೇವೆ. ಆದರೆ ಈ ಒಂದು ಭಟ್ಕಳ ನಗರದಲ್ಲಿ ಆದಂತಹ ಹಿಂದಿನ ಕೆಲವು ಘಟನೆಗಳನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. 1991ನೇ ಇಸವಿಯಲ್ಲಿ 112 ಪ್ರಕರಣಗಳು ಏನು ವರದಿಯಾದವು. ಗಲಭೆಗಳು ನಡೆದಂತಹ ಅವಧಿ ಸುಮಾರು 2 ತಿಂಗಳ ಕಾಲ ಅಲ್ಲಿ ನಡೆಯಿತು. ಗಲಭೆಯಲ್ಲಿ ಗಾಯಗೊಂಡವರ ಸಂಖ್ಯೆ ಹಿಂದೂಗಳು –(1) ಮುಸ್ಲಿಂ –(1), ಗಲಭೆಯಲ್ಲಿ ಮೃತಪಟ್ಟವರು ಹಿಂದೂ–(1). ಅದೇ ರೀತಿಯಾಗಿ 1993ರಲ್ಲಿ ಸುಮಾರು 539 ಪ್ರಕರಣಗಳು ವರದಿಯಾಗಿದೆ, ಸುಮಾರು 6 ತಿಂಗಳ ಕಾಲ ಆ ಸಂದರ್ಭದಲ್ಲಿ ಏನು ಸತತವಾಗಿ ಅಲ್ಲಿ ಏನು ಕೋಮು ಗಲಭೆಗಳು ಆಗುತ್ತಿತ್ತು. ಸುಮಾರು 78 ಜನ ಹಿಂದೂಗಳು ಗಾಯಗೊಂಡು ಮುಸ್ಲಿಂ 43 ಜನ ಗಾಯಗೊಂಡಿದ್ದರು. ಆ ಸಂದರ್ಭದಲ್ಲಿ 9 ಜನ ಹಿಂದೂಗಳು ಮೃತಪಟ್ಟರು. 8 ಜನ ಮುಸ್ಲಿಂರು ಮೃತಪಟ್ಟಿದ್ದಾರೆ. 2002ನೇ ಇಸವಿಯಲ್ಲಿ ಸುಮಾರು 7 ಪ್ರಕರಣಗಳು ವರದಿಯಾಗಿದೆ, ಒಂದು ವಾರಗಳ ಕಾಲ ಅಲ್ಲಿ ಏನು ಕೋಮು ಗಲಭೆಯಾಗಿತ್ತು, ಇವತ್ತು ಸರ್ಕಾರ ಈ ಒಂದು ಘಟನೆ ಬಗ್ಗೆ ಯಾವುದೇ ರೀತಿಯಿಂದ ಅಸಡ್ಡೆಯಿಂದ ಕೆಲಸವನ್ನು ಮಾಡಿಲ್ಲ. ಅಲ್ಲಿ ಅಧಿಕಾರಿಗಳು ತಕ್ಷಣವೇ ಸ್ಪಂದಿಸಿದ್ದಾರೆ. ಐದು ದಿವಸಗಳಲ್ಲಿಯೇ ಒಂದು ವಿಷಯದಲ್ಲಿ ಶಾಂತಿಯನ್ನು ತರುವ ಬಗ್ಗೆ ಸರ್ಕಾರ ಸ್ಪಂದಿಸಿದೆ ಎನ್ನುವ ಬಗ್ಗೆ ಸ್ಪಷ್ಟೀಕರಣವನ್ನು ಕೊಡುವುದಕ್ಕೆ ಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಮುಖ್ಯಮಂತ್ರಿಗಳೇ ತಾವು ಎರಡು ವಿಚಾರಗಳನ್ನು ಹೇಳಿಲ್ಲ. 28 ರವರೆಗೆ ಸೆಕ್ಯುರಿಟಿಯನ್ನು ಏತಕ್ಕೆ ಹಾಕಿಲ್ಲ ಎಂದು ನಾನು ಕೇಳಿದ್ದೇನೆ. 27 ಅಥವಾ 28ನೇ ತಾರೀಖಿನವರೆಗೆ ಸೆಕ್ಯುರಿಟಿಯನ್ನು ಹಾಕಿದ್ದರೆ

ಆ ವಿಗ್ರಹಗಳು ಅಲ್ಲಿ ನಾಪತ್ತೆಯಾಗುವಂತಹ ಸಂಭವವಿರಲಿಲ್ಲ. ಎರಡನೆಯದಾಗಿ ನಾನು ಕಾಂಪನ್‌ಸೇಷನ್ ಬಗ್ಗೆ ನಾನು ಹೇಳಿದ್ದೇನೆ. ಕಾಂಪನ್‌ಸೇಷನ್ ಏನು 1 ಲಕ್ಷದವರೆಗೆ ಇದೆ ಅದು ಬಹಳ ಕಡಿಮೆಯಾಗುತ್ತದೆ. ಅದನ್ನು ಹೆಚ್ಚು ಮಾಡಬೇಕು. ಇಂಜ್ಯೂರ್ಡ್ ಆದವರಿಗೂ ಕೂಡ ಕಾಂಪನ್‌ಸೇಷನ್ ಕೊಡಬೇಕು. ಅದರ ಬಗ್ಗೆ ತಾವು ಸ್ಪಷ್ಟೀಕರಣವನ್ನು ಕೊಡಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) : ಈಗ ಹಣವನ್ನು ಬಿಡುಗಡೆ ಮಾಡಿದ್ದೇವೆ. ಸುಮಾರು 61 ಸಾವಿರ ರೂಪಾಯಿಗಳವರೆಗೆ ಗಾಯಾಳುಗಳಿಗೂ ಸಹ ಕೊಟ್ಟಿರುತ್ತೇವೆ. ಈ ಘಟನೆಯಲ್ಲಿ ಮೃತಪಟ್ಟವರಿಗೂ 1 ಲಕ್ಷ ರೂಪಾಯಿಗಳನ್ನು ಏನು ಕೊಟ್ಟಿರುತ್ತೇವೆ, ಅದರ ಜೊತೆಗೆ ಇನ್ನು ಆ ಕುಟುಂಬದ ಪರಿಸ್ಥಿತಿಯನ್ನು ನೋಡಿಕೊಂಡು ಇನ್ನು ಹೆಚ್ಚಿಸುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ರೋಷನ್‌ಬೇಗ್ : ನಾನು ತಮ್ಮ ಮುಖಾಂತರ ಸನ್ಮಾನ್ಯ ಮುಖ್ಯ ಮಂತ್ರಿಯವರಿಗೆ, ಮನವಿ ಮಾಡಿಕೊಳ್ಳುವುದೇನೆಂದರೆ, ಆ ಕೋಸ್ಟಲ್ ಬೆಲ್ಟ್ ಏನಿದೆ, ಕಾರವಾರದಿಂದ ಹಿಡಿದು ಮಂಗಳೂರಿನವರೆಗೂ ಇದು ಒಂದು 300 ಕಿಲೋ ಮೀಟರ್‌ನವರೆಗೆ ಇದೆ. ಆ ಕಾಲದಲ್ಲಿ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಜೆಹೆಚ್. ಪಾಟೀಲ್‌ರವರು ಒಂದು ಕೋಸ್ಟಲ್ ಪೊಲೀಸ್ ಫೋರ್ಸ್ ಎಂದು ಅಲ್ಲಿ ಸೆಟ್‌ಅಪ್ ಮಾಡಿದ್ದರು. ಅದು ಫಸ್ಟ್ ಟೈಮ್ ಇನ್ ದಿನ ಕಂಟ್ರಿ, ಈಗ ಕೇಂದ್ರ ಸರ್ಕಾರದವರು ಕೋಸ್ಟಲ್ ಪೊಲೀಸ್ ಫೋರ್ಸ್ ಬಗ್ಗೆ ಮಾತನಾಡುತ್ತಿದ್ದಾರೆ. ಇಲ್ಲಿ 10 ವರ್ಷಗಳ ಮುಂಚೆಯೇ ಕೋಸ್ಟಲ್ ಪೊಲೀಸ್ ಪೋರ್ಸ್ ಎಂದು ಇತ್ತು. ಅಲ್ಲಿಯ ಕೋಸ್ಟಲ್ ಪೊಲೀಸ್ ಫೋರ್ಸ್‌ನವರಿಗೆ ಈಗ ಅಲ್ಲಿ ಯಾವುದು ಕೆಲಸವಿಲ್ಲ. ಅಲ್ಲಿ ಯಾರು ಸಿಬ್ಬಂದಿಗಳು ಇಲ್ಲ. ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಆಮೇಲೆ ಅಲ್ಲಿ ನಾವು ಏನು ಮಾಡಿದ್ದೇವೆಂದರೆ ಮಂಗಳೂರು ಏನು ಏರ್‌ಪೋರ್ಟ್ ಆಗಿದೆ, ಒಂದು ಕಡೆ ಬಂದರ್‌ಗೆ ಆಗಿದೆ, ಅಲ್ಲಿಗೆ ಯಾರು ಬರುತ್ತಾರೆ, ಯಾರು ಹೋಗುತ್ತಾರೆ, ಅಲ್ಲಿ ಏನು ನಿಗಾವೇ ಇರುವುದಿಲ್ಲ. ಮಂಗಳೂರು ಏರ್‌ಪೋರ್ಟಿಗೆ ಕೂಡ ಯಾರು ಬೇಕಾದರೂ ಬರಬಹುದು, ಯಾರು ಬೇಕಾದರೂ ಕೂಡ ಹೋಗಬಹುದು. ಅಲ್ಲಿ RAW I.B. ಸ್ಟೇಟ್ ಇಂಟಲಿಜೆನ್ಸ್ ಇವರೆಲ್ಲರೂ ಕೋಆರ್ಡಿನೇಷನ್ ಮಾಡುವುದಕ್ಕೆ ಅಲ್ಲಿ ಐಜಿಪಿಯವರು ಒಂದು ನೋಡಲ್ ಆಫೀಸರ್ ಎಂದು ಮಾಡಿದ್ದರು. ಆಗ ಅಲ್ಲಿ ಮೀಟಿಂಗ್‌ಗಳು ಆಗುತ್ತಿಲ್ಲ. ಪ್ರತಿಯೊಂದು ತಿಂಗಳಿಗೆ ಎರಡು ತಿಂಗಳಿಗೆ ಒಂದು ಸಾರಿ ಮೀಟಿಂಗ್‌ಗಳು ಆದರೆ ಆಗ ಯಾರ‍್ಯಾರು ಬರುತ್ತಾರೆ, ಜಗಳಕ್ಕೆ ಯಾರ‍್ಯಾರು ಹೋಗುತ್ತಾರೆ, ಅಲ್ಲಿ ಏನೇನು ಆಕ್ಟಿವಿಟೀಸ್‌ಗಳು ನಡೆಯುತ್ತದೆ, ಇವತ್ತು ಏನು ಅಲ್ಲಿ ಇನ್‌ಸಿಡೆಂಟ್ ಆಗಿದೆ, ಇವು ಗೊತ್ತಾಗುತ್ತದೆ. ತಾವು 5-6 ದಿವಸಗಳಲ್ಲಿ ಅಲ್ಲಿ ಕಂಟ್ರೋಲ್‌ಗೆ ತೆಗೆದುಕೊಂಡು ಬಂದಿದ್ದೀರಿ. ಆ ಎಂಟೈರ್ ಬೆಲ್ಟ್ ಅದು ಸೆನ್ಸಿಟೀವ್ ಬೆಲ್ಟ್ ಆಗಿದೆ ಅಲ್ಲಿ ಪ್ರತಿಯೊಂದಕ್ಕೂ ಐಎಸ್‌ಐ ಎಂದು ಹೇಳುತ್ತಾರೆ, ಅದು ಇರಬಹುದು

ಈ ತರಹದವರ ಮೇಲೆ ಎಲ್ಲಾ ನಿಗಾವಿಟ್ಟು ಈಗ ಹಾಸ್ಪಟಲ್‌ಗೆ ಕರೆದುಕೊಂಡು ಹೋಗುತ್ತಿರಬೇಕಾದರೆ ಅಲ್ಲಿ ಡಾಕ್ಟರ್ಸ್‌ಗಳನ್ನು ಥ್ರೆಟನ್ ಮಾಡಿದರಲ್ಲಾ ಅವರೆಲ್ಲಾ ಐಎಸ್‌ಐನವರಾ? ಆ್ಯಂಬುಲೆನ್ಸ್‌ನಲ್ಲಿ ಹೋಗುತ್ತಿರಬೇಕಾದರೆ, ಅದನ್ನು ನಿಲ್ಲಿಸಿ ಆ್ಯಂಬುಲೆನ್ಸ್ ಅಟ್ಯಾಕ್ ಮಾಡಿದರಲ್ಲಾ ಅವರೆಲ್ಲಾ ಐಎಸ್‌ಐನವರಾ? ಅದಕ್ಕಾಗಿ ತಮ್ಮ ಮುಖಾಂತರ ಸನ್ಮಾನ್ಯ ಮುಖ್ಯಮಂತ್ರಿ ಯವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಇನ್ನು ಮುಂದೆ ಇಂತಹ ಘಟನೆಗಳು ಎಂಪೈರ್ ಆ ಬೆಲ್ಟ್‌ನಲ್ಲಿ ಆಗಬಾರದು. ಇದರಲ್ಲಿ ಕೋ ಆರ್ಡಿನೇಷನ್ ಇರಬೇಕು. ಇಲ್ಲಿ ಕೋ ಆರ್ಡಿನೇಷನ್ ಇಲ್ಲ. ಅವರೇನು ಮಾಡುತ್ತಿದ್ದಾರೆಂದು ಐ.ಜಿ.ಯವರಿಗೆ ಗೊತ್ತಿಲ್ಲ. ಐಜಿಯವರು ಏನು ಮಾಡುತ್ತಾರೆಂದು ಸ್ಟೇಟ್ ಇಂಟಲಿಜೆನ್ಸ್‌ನವರಿಗೆ ಗೊತ್ತಿಲ್ಲ. ಸ್ಟೇಟ್ ಇಂಟಲಿಜೆನ್ಸಿಯವರು ಏನು ಮಾಡುತ್ತಾರೆಂದು ಇಲ್ಲಿ ಬೆಂಗಳೂರಿನವರಿಗೆ ಗೊತ್ತಿರುವುದಿಲ್ಲ. ಅವರು ಸಂಜೆವಾಣಿ ಪತ್ರಿಕೆಯನ್ನು ನೋಡಿಕೊಂಡು ಸಾಯಂಕಾಲ ಬಂದು ಸಿ.ಎಂ.ಗೆ ಹೇಳಿಬಿಡುತ್ತಾರೆ. ಸಾರ್ ಈ ತರಹ ಘಟನೆಗಳು ಆಗಿದೆ. ಎಂಟೈರ್ ಇಂಟಲಿಜೆನ್ಸಿ ನೆಟ್‌ವರ್ಕ್‌ನ್ನು ಸರಿಯಾಗಿ ಮಾಡಿಸಬೇಕು. ಮುಂದೆ ಈ ತರಹ ಈ ಬೆಲ್ಟ್‌ನಲ್ಲಿ ಇಂತಹ ಆಕ್ಟಿವಿಟೀಸ್‌ಗಳು ಆಗಬಾರದು ಎಂದು ನಾನು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ ತಾವು ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ನಾನು ಈ ವಿಚಾರದ ಬಗ್ಗೆ ಮಾತನಾಡುವಾಗ ಎರಡು ವಿಚಾರಗಳ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೆ. ಭಟ್ಕಳದಲ್ಲಿ ಇಂಟೆಲಿಜೆನ್ಸ್ ಸಂಪೂರ್ಣವಾಗಿ ವಿಫಲವಾಗಿದೆ. ಏಕೆಂದರೆ ಇದು ಪ್ರಾರಂಭವಾಗಿರುವುದು 22ನೇ ತಾರೀಖು ಮಾರ್ಚಿ ತಿಂಗಳಲ್ಲಿ ಏಕೆಂದರೆ ಏಡಿಬಿನವರು ನೀರಾವರಿಯನ್ನು ಸರಬರಾಜು ಮಾಡುವುದಕ್ಕೆ ಅಳತೆ ಮಾಡಿ ಮೇಜರ್‌ಮೆಂಟ್ ಮಾಡಿದಂತಹ ಸಂದರ್ಭದಲ್ಲಿ ಅವತ್ತೇ ಅಲ್ಲಿ ಘರ್ಷಣೆಯಾಗಿದೆ. ಇಲ್ಲಿ ಪೈಪ್‌ಲೈನ್ ತೆಗೆಯಬಾರದು ಹೇಳತಕ್ಕಂಥವರು ಒಬ್ಬರು, ತೆಗೆಯಬೇಕೆಂದು ಇನ್ನೊಬ್ಬರು ಇದರ ಬಗ್ಗೆ ಅಲ್ಲಿ ಘರ್ಷಣೆ ಪ್ರಾರಂಭವಾಗಿದೆ. ಈ ವಿಗ್ರಹವನ್ನು ಎತ್ತಿಕೊಂಡು ಹೋಗಿರುವುದು 28ನೇ ತಾರೀಖಿನ ರಾತ್ರಿ ಭಟ್ಕಳದ ಇತಿಹಾಸದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇಷ್ಟು ವರ್ಷಗಳು ಅಲ್ಲಿ ಏನೇನಾಯಿತು ಎಂಬುದರ ಬಗ್ಗೆ ಹೇಳಿದರು. ಈ ಇಂಟೆಲಿಜೆನ್ಸ್‌ರವರಿಗೆ ಏನಾದರೂ ಕಾಮನ್‌ಸೆನ್ಸ್ ಇದ್ದಿದ್ದರೆ ಈ ಗಲಾಟೆಯು 22ನೇ ತಾರೀಖು ಪ್ರಾರಂಭವಾಗಿದೆ. 30ನೇ ತಾರೀಖು ಕೊಲೆಯಾಗಿದೆ, ಈ ತರಹದ ಘಟನೆಗಳು ನಡೆಯುತ್ತದೆಂದು ಗೊತ್ತಿದ್ದರೂ ಕೂಡ ಇಂಟಲಿಜೆನ್ಸಿಯವರು ಏನು ಮಾಡುತ್ತಿದ್ದರು ಎನ್ನುವಂತಹ ಪ್ರಶ್ನೆಯನ್ನು ನಾನು ಕೇಳಿದ್ದೆ. ಭಟ್ಕಳದಂತಹ ಸೂಕ್ಷ್ಮ ಪ್ರದೇಶದಲ್ಲಿ ಇಂತಹ ಘಟನೆ ನಡೆಯುತ್ತದೆಂದು ಗೊತ್ತಿದ್ದರೂ ಕೂಡ 22ನೇ ತಾರೀಖಿನಿಂದ 28ನೇ ತಾರೀಖಿನವರೆಗೆ ಪೋಲೀಸ್ ಇಂಟಲಿಜೆನ್ಸಿಯವರು ಹೇಗೆ ಇದ್ದರು, ಏನು ಮಾಡುತ್ತಿದ್ದರು ಎನ್ನುವ ಒಂದು ಪ್ರಶ್ನೆಯನ್ನು ನಾನು ಕೇಳಿದೆ. ನಾನು ಎರಡನೆಯ ವಿಚಾರವನ್ನು

ಹೇಳಿರುವುದು ಸರ್ಕಾರದಲ್ಲಿ ಕೋ-ಆರ್ಡಿನೇಷನ್ ಇಲ್ಲ, ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಉತ್ತರವನ್ನು ಹೇಳಿದರು. "ನಾನು ಭಟ್ಕಳದ ಘಟನೆ ಬಗ್ಗೆ ರಾಜಕೀಯ ಶಕ್ತಿಗಳ ಕೈವಾಡ ಇದೆಯೆಂದು ಹೇಳಲಿಲ್ಲ. ನಾನು ಈದ್ಗಾದ ಬಗ್ಗೆ ಹೇಳಿದೆ" ಎಂದು ಹೇಳಿದರು. ಇದರ ಬಗ್ಗೆ ಕನ್ನಡಪ್ರಭಾ ಪತ್ರಿಕೆಯಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಪೊಲೀಸ್ ಧ್ವಜಾದಿನಾಚರಣೆಯಲ್ಲಿ ಮಾತನಾಡುತ್ತಾ ಮುಖ್ಯಮಂತ್ರಿಗಳು ಭಟ್ಕಳದ ಬಗ್ಗೆ ಹೇಳಿದ್ದಾರೆಂದು ಇದೆ. ಬೇರೆ ಬೇರೆ ಪತ್ರಿಕೆಯಲ್ಲಿ ಬೇರೆ ಬೇರೆ ವಿಷಯ ಬಂದಿದೆ. ಅದು ಏನು ಇದ್ದರೂ ಕೂಡ ಸೂಕ್ಷ್ಮವಾಗಿ ಅದನ್ನು ಗಮನಿಸಿದರೆ ಯಾವ ಸಂದರ್ಭದಲ್ಲಿ ಡಿ.ಸಿ.ಎಂ. ಹಾಗೂ ಸಿ.ಎಂ. ನವರದು ಹೇಳಿಕೆ ಬಂದಿದೆ ಎಂಬುದು ಮುಖ್ಯ. ಭಟ್ಕಳ ಘಟನೆಯ ಹಿನ್ನೆಲೆಯಲ್ಲಿ ಆ ಹೇಳಿಕೆಯು ಬಂದಿದ್ದಾಗ it has the implied meaning. ಅದರ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕೆಂದು ಯಾರು ಕೂಡ ಹೇಳುವುದಿಲ್ಲ. ಭಟ್ಕಳದಲ್ಲಿ ಐಎಸ್ಐನವರು ಗಲಭೆ ಮಾಡಿದ್ದಾರೆಂದು ಡಿಸಿಎಂನವರು ಹೆಳಬೇಕಾದಂತಹ ಅವಶ್ಯಕತೆ ಇಲ್ಲ. ಭಟ್ಕಳದಲ್ಲಿ ಘಟನೆ ನಡೆದಂತಹ ಹಿನ್ನೆಲೆಯಲ್ಲಿ ಆ ಪ್ರಶ್ನೆ ಬಂದಾಗ, ಉತ್ತರ ಕೊಟ್ಟಂತಹ ಇನ್ವ್ಲೈಡ್ ಮೀನಿಂಗ್ ಏನು? That is most important. ಹಾಗೆಯೇ ಸಿ.ಎಂ.ರವರು ರಾಜಕೀಯ ಪಕ್ಷಗಳ ಕೈವಾಡ ಇದೆ ಎಂದು ಆ ಸಂದರ್ಭದಲ್ಲಿ ಹೇಳಿದಾಗ what is the implied meaning ಅದು ಏನು ತೋರಿಸುತ್ತದೆಂದು ಹೇಳಿದರೆ ಈಗ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಈ ಸ್ಟೇಟ್‌ಮೆಂಟ್ ಕೊಡತಕ್ಕಂಥದ್ದು ಅಲ್ಲ. ಯಾವ ಸಂದರ್ಭದಲ್ಲಿ ಯಾವ ಪಾಯಿಂಟ್ ಅಫ್‌ವ್ಯೂ, ಯಾವ ಕಾಂಟೆಸ್ಟ್‌ನಲ್ಲಿ ನಾವು ಹೇಳುರುತ್ತೇವೆ, ಆ context is the most important. ಈ ರೀತಿಯಾದ ಹೇಳಿಕೆಗಳು ಬಂದಂತಹ ಸಂದರ್ಭದಲ್ಲಿ ಪೊಲೀಸ್‌ನವರಲ್ಲಿ ಗೊಂದಲ ಶುರುವಾಗುತ್ತದೆ. ಐಎಸ್ಐ ಅಥವಾ ರಾಜಕೀಯ ಪಕ್ಷಗಳ ಕೈವಾಡವೇ ರಾಜಕೀಯ ಪಕ್ಷಗಳ ಕೈವಾಡ ಎಂದರೆ the way of dealing will be different by the police. ಐಎಸ್ಐ ಕೈವಾಡ ಎಂದರೆ the way of dealing by the police will be different. ಆದ್ದರಿಂದ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕ್ಲಾರಿಫಿಕೇಷನ್‌ನ್ನು ಕೊಡಬೇಕು.

ಉಪಾಧ್ಯಕ್ಷರು : ಮಾನ್ಯ ಹೆಗ್ಡೆಯವರು ಮಾತನಾಡಿ.

ಶ್ರೀ ಕೆ. ಜಯಪ್ರಕಾಶಹೆಗ್ಡೆ : ಮಾನ್ಯ ಉಪಾಧ್ಯಕ್ಷರೆ, ಭಟ್ಕಳದಲ್ಲಿ ಆದಂತಹ ಗಲಭೆಗೆ ಉತ್ತರವನ್ನು ಕೊಟ್ಟಿದ್ದಾರೆ. ಪುನಃ ಅದನ್ನು ಕೇಳುವುದಕ್ಕೆ ಹೋಗುವುದಿಲ್ಲ. ಅದರ ನಂತರ ಉಡುಪಿ ಜಿಲ್ಲೆ ಬಂದ್‌ಗೆ ಕರೆಕೊಟ್ಟಿರುವುದು, ಮಾನ್ಯ ಸದಸ್ಯರಾದ ಶ್ರೀ ರಘುಪತಿ ಭಟ್‌ರವರು ಹೇಳಿದರು. ಸಂಘಟನೆಗಳು ಬಂದ್ ಕರೆ ಕೊಟ್ಟಿರುವುದನ್ನು ವಾಪಸ್ಸು ತೆಗೆದುಕೊಂಡಿದೆ ಎಂಬುದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ. ಬಂದ್ ಕಾಲ್‌ನ್ನು ವಿತ್‌ಡ್ರಾ ಮಾಡಿದ್ದಾರೆಂದು ಎಂದು ಬಂದಿದೆ. ಹಾಗಾದರೆ ಬಂದ್ ಯಾರು ಮಾಡಿಸಿದ್ದಾರೆ? ಇಡೀ ಜಿಲ್ಲೆಯಾದ್ಯಂತ ಬಂದ್ ಮಾಡಬೇಕಾದರೆ ಸಾರ್ವಜನಿಕರು ಮಾಡಿಸಿದ್ದಾರೆಂದು

ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಸಾರ್ವಜನಿಕರು ಮಕ್ಕಳು ಪರೀಕ್ಷೆಗೆ ಹೋಗುವುದಕ್ಕೆ ಸಹಾಯವನ್ನು ಮಾಡಿದ್ದಾರೆ. ಪೊಲೀಸರು ಸ್ವಲ್ಪ ವೆಹಿಕಲ್‌ಗಳನ್ನು ಕೊಟ್ಟು ಸಹಾಯ ಮಾಡಿದ್ದಾರೆ. ಅದರ ಬಗ್ಗೆ ನನ್ನ ಹತ್ತಿರ ಇನ್‌ಫರ್ಮೇಷನ್ ಇದೆ. ಮಕ್ಕಳೆಲ್ಲರೂ ಪರೀಕ್ಷೆಗೆ ಹೋಗಲು ಕಳುಹಿಸಿಕೊಟ್ಟಿದ್ದಾರೆ. I must compliment them. ಆದರೆ ಈ ಬಂದ್‌ನ್ನು ಯಾರು ಮಾಡಿಸಿದ್ದಾರೆ? ಹಾಗಾದರೆ ಸರ್ಕಾರ ಅಲ್ಲ, ಇವರ ಸಂಘಟನೆಯೂ ಕೂಡ ಅಲ್ಲ, extra-constitutional authority ಆ ಜಿಲ್ಲೆಯಲ್ಲಿ ಬೇರೆ ಯಾರು ಇದ್ದಾರೆ. ನಾನು ಮೊನ್ನೆ ಇನ್ನೊಂದು ಪತ್ರಿಕೆಯನ್ನು ಓದಿದೆ, ಮಾರಲ್ ಪೊಲೀಸ್ ಎಂದು ಪ್ರಾರಂಭವಾಗಿದೆ. ಯಾರ್‍ಯಾರು ಬೇರೆ ಬೇರೆ ವಿಷಯಗಳಲ್ಲಿ ಹೋದಾಗ ಅವರನ್ನು ಹಿಡಿದುಕೊಂಡು ಹೋಗುವುದು, ಥಳಿಸುವುದು ಮತ್ತು ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗುವುದು, ಹಾಗಾದರೆ ಇವರಿಗೆ ಅಧಿಕಾರವನ್ನು ಕೊಟ್ಟವರು ಯಾರು? ಪ್ರಥಮವಾಗಿ ಅಲ್ಲಿ ಯಾರು ಬಂದ್ ಮಾಡಿಸಿದ್ದಾರೆ? ಅದಕ್ಕೆ ಜವಾಬ್ದಾರಿ ಯಾರು? ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? ಮತ್ತೇ ಈ ಮಾರಲ್ ಪೊಲೀಸ್ ಅಂದರೆ ಯಾರು? ಅವರಿಗೆ ಪೊಲೀಸ್‌ನವರು ಏನು ಅಧಿಕಾರವನ್ನು ಕೊಟ್ಟಿದ್ದಾರೆ? ಇದರ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಜಿಲ್ಲೆಯಲ್ಲಿ ಇನ್ನು ಅನೇಕ ಘಟನೆಗಳು ಆಗುವಂತಹ ಸಂದರ್ಭಗಳು ಇವೆ. ದಯವಿಟ್ಟು ಈ ಮಾರಲ್ ಪೊಲೀಸ್‌ನವರನ್ನು ತಕ್ಷಣದಲ್ಲಿ ಹಿಡಿತದಲ್ಲಿಟ್ಟುಕೊಂಡು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಆಗಬೇಕು. ಮೊನ್ನೆ ಬಂದ್ ಮಾಡಿಸಿರುವ ಬಗ್ಗೆ ಯಾರು ಜವಾಬ್ದಾರಿ? ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುವುದು ಆಗಬೇಕು. ಮೊನ್ನೆ ಬಂದ್ ಮಾಡಿಸಿರುವ ಬಗ್ಗೆ ಯಾರು ಜವಾಬ್ದಾರಿ? ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದರ ಬಗ್ಗೆ ಸರ್ಕಾರ ಹೇಳಬೇಕು.

ಶ್ರೀ ಕೆ. ರಘುಪತಿ ಭಟ್ (ಉಡುಪಿ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಹೆಗ್ಡೆಯವರು ಹೇಳಿರುವುದಕ್ಕೆ ನಾನು ಮಾಹಿತಿ ಕೊಡುವುದೇನೆಂದರೆ, ...

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ತಮ್ಮ ಸಂಘಟನೆಯ ಬಗ್ಗೆ ನಾನು ಹೇಳುತ್ತಿಲ್ಲ.

ಶ್ರೀ ಕೆ. ರಘುಪತಿ ಭಟ್ : ನನಗೆ ವಿಷಯ ಗೊತ್ತಿರುವ ಬಗ್ಗೆ ನಾನು ಹೇಳುತ್ತೇನೆ. ಮೊನ್ನೆ ನಡೆದಂತಹ ಸಂಘಟನೆಗೆ ವಿಶ್ವಹಿಂದೂಪರಿಷತ್ ಮತ್ತು ಭಜರಂಗದಳ ಕೆಲವು ನಾಯಕರು ಹೇಳಿಕೆಯೊಂದನ್ನು ಕೊಟ್ಟಿದ್ದಾರೆ. ಆಗ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಉಸ್ತುವಾರಿ ಸಚಿವರು ಹಾಗೂ ನಮಗೆ ತಿಳಿಸಿದ್ದಕ್ಕೆ ತಕ್ಷಣ ನಮ್ಮ ಸಂಘ ಪರಿವಾರದ ಸಭೆಯನ್ನು ಕರೆದು ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿದೆವು ಅದಕ್ಕೆ ಅವರು ಸಂಜೆಯೊಳಗೆ ವಾಪಸ್ಸು ತೆಗೆದುಕೊಂಡಿದ್ದಾರೆ. ಬಿಜೆಪಿಯಿಂದ ಅನ್ನು ಬಂದ್ ಮಾಡಬಾರದು ಎಂದು ನಾವು ತೀರ್ಮಾನ ಮಾಡಿದ್ದೇವೆ. ಇದರ ಬಗ್ಗೆ ನಮ್ಮ ಉಸ್ತುವಾರಿ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆದರೆ ಮಾಡಿದ್ದು ಯಾರೆಂದರೆ, ಹಿಂದೂ ಮಹಾಸಭಾದವರು, ಪ್ರಮೋದ್ ಮುತಾಲಿಕ್‌ರವರ ಸಂಘಟನೆ, ಅದಕ್ಕೂ

ನಮ್ಮ ಸಂಘಟನೆಗೂ ಯಾವುದೇ ಸಂಬಂಧ ಇಲ್ಲ. ಅದು ಸಂಘ ಪರಿವಾರದ ಸಂಘಟನೆಯಲ್ಲ. ಅದು ಹಿಂದೂ ಯುವಸೇನೆ ಅದಕ್ಕೆ ನಮಗೆ ಸಂಬಂಧ ಇಲ್ಲ. ಯಾರು ಮಾಡಿದ್ದಾರೆಂಬುದಕ್ಕೆ ಮಾಹಿತಿಯನ್ನು ಕೊಡುತ್ತಿದ್ದೇನೆ.

(ಗೊಂದಲ)

ಶ್ರೀ ರಘುಪತಿ ಭಟ್ (ಉಡುಪಿ) : ನನಗೆ ಮಾತನಾಡಲಿಕ್ಕೆ ಬಿಡಿ, ಇದಕ್ಕೂ ನಮ್ಮ ಸಂಘ ಪರಿವಾರಕ್ಕೆ ಯಾವುದೇ ಸಂಬಂಧವಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅವರಿಗೆ ಮಾತನಾಡಲಿಕ್ಕೆ ಬಿಡಿ.

ಶ್ರೀ ದಿನೇಶ್ ಗುಂಡೂರಾವ್ : ಅಧ್ಯಕ್ಷರೇ, ನೋಡಿ ಅವತ್ತು ಕೂಡ ಇವರು ಆರ್.ಎಸ್.ಎಸ್. ನವರು ಇದನ್ನೇ ಮಾಡಿದರು. ಇನ್ನೊಬ್ಬರ ಮೇಲೆ ಹೇಳುವುದು, ಮಾಡೋ ಕೆಲಸ ಮಾಡುತ್ತಿರುವುದು, ನೀವು ಇದನ್ನು ಒಪ್ಪಿಕೊಳ್ಳಿ ಹಿಂದೂ ಮಹಾಸಭೆಗಳು, ಪ್ರಮೋದ್ ಮುತಾಲಿಕ್ ಅವರು ಇದರಲ್ಲಿ ಇಂಟರ್‌ಫಿಯರ್ ಆಗಿಲ್ಲವೆಂಬುದನ್ನು ತಾವು ಒಪ್ಪಿಕೊಳ್ಳಿ.

ಶ್ರೀ ರಘುಪತಿ ಭಟ್ : ನನಗೆ ಮಾತನಾಡಲಿಕ್ಕೆ ಬಿಡಿ ಸ್ವಾಮಿ ದಯವಿಟ್ಟು, ನೀವು ಮಾತನಾಡುವಾಗ ನಾನು ಹಾಗೇ ಮಾತನಾಡಿದ್ದೇನೆಯೇ? ಮಾನ್ಯ ಅಧ್ಯಕ್ಷರೇ, ಆ ಬಂದ್‌ಗೆ ನಮ್ಮ ಬೆಂಬಲ ಇರಲಿಲ್ಲ ಒಂದನೆಯದು, ಮತ್ತೆ ಯಾವಾಗ ಬಂದ್ ಆಗುವಾಗ ಪಿ.ಯು.ಸಿ. ಪರೀಕ್ಷೆ ನಮ್ಮ ಉಡುಪಿ ಜಿಲ್ಲೆಯಲ್ಲಿ 100% ಅಟೆಂಡೆನ್ಸ್ ಆಗುವಂತಹ ರೀತಿಯಲ್ಲಿ ನಾವು ನೋಡಿಕೊಂಡಿದ್ದೇವೆ, ಅದಕ್ಕೆ ಸಂಬಂಧವಿಲ್ಲ.

ಅಧ್ಯಕ್ಷರು : ಈಗ ಬೆಂಬಲ ಇಲ್ಲ ಎಂದು ಹೇಳಿದರೆ ಆಯಿತು ಬಿಡಿ.

ಶ್ರೀ ರಘುಪತಿ ಭಟ್ : ಇನ್ನೊಂದು ವಿಷಯವನ್ನು ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುವಂತಹದು ಏನೆಂದರೆ, ನಮ್ಮ ಜಿಲ್ಲೆ ಎಲ್ಲರೂ ಹೇಳಿದ ಹಾಗೆ ಸೂಕ್ಷ್ಮವಾದ ಪ್ರದೇಶವೆಂದು ಹೇಳುತ್ತಿದ್ದಾರೆ. ಎರಡೂ ಕಾಲಕ್ಕೆ, ಒಂದು ಐ.ಎಸ್.ಐ. ಚಟುವಟಿಕೆ ನಮ್ಮಲ್ಲಿದೆ ಎನ್ನುವುದನ್ನು ಯಡಿಯೂರಪ್ಪನವರು ಹೇಳಿದ್ದಲ್ಲ, ನಮ್ಮ ಕರಾವಳಿ ಭಾಗದಲ್ಲಿ ಐ.ಎಸ್.ಐ. ಇದೆಯೆಂಬುದನ್ನು ಎಲ್ಲರೂ ಹೇಳಿದ್ದಾರೆ. ಇಂಟೆಲಿಜೆನ್ಸಿ ರಿಪೋರ್ಟ್ ಕೂಡ ಹೇಳಿದೆ, ಅದೇ ದಿವಸ ರಾಜ್ಯಸಭಾ ಸದಸ್ಯರಾದಂಥ ಶ್ರೀ ಜನಾರ್ಧನ ಪೂಜಾರಿಯವರು ಸಹ ಈ ಭಟ್ಕಳ ಗಲಭೆಗೆ ಐ.ಎಸ್.ಐ. ಚಟುವಟಿಕೆಯೇ ಈ ಕರಾವಳಿ ಭಾಗದಲ್ಲಿ ಜಾಸ್ತಿಯಾಗುತ್ತಿರುವುದಕ್ಕೆ ಕಾರಣವೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರ ಹೇಳಿಕೆಯನ್ನು ತಪ್ಪು ಎಂದು ಹೇಳುವುದಲ್ಲ, ಇಂಟೆಲಿಜೆನ್ಸ್ ಇದೆ, ನಮ್ಮ ಜಿಲ್ಲೆಯಲ್ಲಿ ಐ.ಎಸ್.ಐ. ಚಟುವಟಿಕೆ ನಮ್ಮ ಕರಾವಳಿ ಭಾಗದಲ್ಲಿ ಜಾಸ್ತಿಯಾಗುತ್ತಿದೆಯೆಂಬುದನ್ನು ನಮ್ಮ ಜಿಲ್ಲೆಯ ಪ್ರತಿಯೊಬ್ಬರೂ ಸಹ ಹೇಳುತ್ತಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸುವುದೇನೆಂದರೆ, ಈ ಐ.ಎಸ್.ಐ. ಚಟುವಟಿಕೆಗಳನ್ನು ಹತ್ತಿಕ್ಕುವಂತಹ ಪ್ರಯತ್ನವನ್ನು

ಮಾಡಬೇಕು. ಅದರೊಟ್ಟಿಗೆ ನಕ್ಸಲ್ ಎರಡೂ ಇದೆ, ನಮ್ಮ ಗೃಹ ಇಲಾಖೆಯ ಪೋಲೀಸ್ ಇಲಾಖೆಯನ್ನು ಬಲಪಡಿಸುವ ಕೆಲಸವಾಗದಿದ್ದರೆ ಇಂತಹ ಭಟ್ಕಳದಂತಹ ಹಲವಾರು ಘಟನೆಗಳು ಆಗಬಹುದು, ಇತ್ತೀಚೆಗೆ ನಮ್ಮ ಜಿಲ್ಲೆಯಲ್ಲಿ ಕೋಮು ಗಲಭೆಗಳಿಲ್ಲದೆ ಕೋಮು ಸೌಹಾರ್ದತೆಯಿಂದ ನಡೆಯುತ್ತಿದೆ. ಅದನ್ನು ತಾವೆಲ್ಲಾ ಪ್ರಶಂಸಿಸಬೇಕು. ಅದನ್ನು ಬಿಟ್ಟು ಕೇವಲ ಕರಾವಳಿ ಪ್ರದೇಶ ಬಹಳ ಸೂಕ್ಷ್ಮವಾದ ಪ್ರದೇಶವೆಂದು ಹೇಳುವುದಲ್ಲ. ಅದರ ಬಗ್ಗೆ ಹೇಳಬೇಕಾದರೆ ನಮ್ಮ ಕರಾವಳಿಯಲ್ಲಿ ಕೋಮು ಸೌಹರ್ದತೆ ಹೆಚ್ಚು ಆಗುತ್ತಿವೆ ಅದನ್ನು ಮೆಚ್ಚಬೇಕು, ಪುನಃ ಯಾರ್ಯ್ಯಾರೋ ಕರಾವಳಿ ಪ್ರದೇಶ ಬಹಳ ಸೂಕ್ಷ್ಮವಾಗಿದೆಯೆಂದು ಹೇಳಿಕೊಂಡು ನಮ್ಮ ಜನರ ಭಾವನೆಗಳನ್ನು ಕೆರಳಿಸಲಿಕ್ಕೆ ಹೋಗಬಾರದು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಉಡುಪಿ ಜಿಲ್ಲೆಯ ಕುಂದಾಪುರ ಕ್ಷೇತ್ರದ ಶಾಸಕ ನಾನು.

ಅಧ್ಯಕ್ಷರು : ಅವರು ಹೇಳಿದ್ದಾರೆ, ಮತ್ತೆ ಮತ್ತೆ ಏಕೆ ಅದನ್ನೆ ಹೇಳುತ್ತಾರೆ. ಚರ್ಚೆಯಾಗಿದೆ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ : ಅವರು ಮಾತನಾಡುತ್ತಿದ್ದಾರೆ. ಅವರು ಮಾತನಾಡಲಿ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಉಡುಪಿ ಜಿಲ್ಲೆಯ ಕುಂದಾಪುರದ ಶಾಸಕ, ನಮ್ಮ ಜಯಪ್ರಕಾಶ್ ಹೆಗ್ಡೆಯವರು ಹೇಳಿದರು, ಆಪಾದನೆ ಮಾಡಿದ್ದಕ್ಕೆ ಹೇಳಬೇಕಲ್ಲಾ.

ಅಧ್ಯಕ್ಷರು : ಈಗ ರಘುಪತಿ ಭಟ್‌ರವರು ಎಲ್ಲಾ ಸ್ಪಷ್ಟೀಕರಣ ಕೊಟ್ಟಿದ್ದಾರೆ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಉಡುಪಿ ಜಿಲ್ಲೆಯಲ್ಲಿ ಭಾರತೀಯ ಜನತಾ ಪಕ್ಷದವರು ಬಂದ್‌ಗೆ ಕರೆ ಕೊಟ್ಟಿದ್ದಾರೆ. ಅದಕ್ಕೆ ಕಾರಣಕರ್ತರು ಯಾರು? ನನಗೆ ಎಂಟು–ಒಂಬತ್ತು ಗಂಟೆಗೆ ಫೋನ್ ಬಂತು, ಭಟ್ಕಳದಲ್ಲಿ ಎರಡು ಜನ ಸತ್ತು ಹೋಗಿದ್ದಾರೆ. ಎರಡೂ ಧರ್ಮದವರು ಒಬ್ಬರು, ಹಿಂದೂ ಧರ್ಮದವರು ಇಬ್ಬರು ಸತ್ತಿದ್ದಾರೆ ಎಂದು ಹೇಳಿದರು. ಬಂದ್‌ಗೆ ಕರೆ ಕೊಡಬೇಕು, ಏನಾದರೂ ಮಾಡಬೇಕು ಎಂದು ಹೇಳಿದರು. ನಾನು ಆಗ ನೆರೆ ಶಾಸಕರಾದ ರಘುಪತಿ ಭಟ್‌ರವರಿಗೆ ಫೋನ್ ಮಾಡಿದೆ, ಅವರು "ನಾನು ಬಂದ್‌ಗೆ ಕರೆ ಕೊಡುವುದಿಲ್ಲ, ನಾನು ಇದಕ್ಕೆ ಪ್ರೋತ್ಸಾಹ ಮಾಡುವುದಿಲ್ಲ, ನಮ್ಮ ಸರ್ಕಾರಕ್ಕೆ ಜವಾಬ್ದಾರಿಯಿದೆ" ಎಂದು ಹೇಳಿದಾಗ ನಾವು ಯಾರೂ ಬಂದ್‌ಗೆ ಕರೆ ಕೊಡಲಿಲ್ಲ, ನಮ್ಮ ಕುಂದಾಪುರದಲ್ಲಿ ಒಂದೇ ಒಂದು ಅಂಗಡಿ ಸಹ ಬಂದಾಗಲಿಲ್ಲ, ಉಡುಪಿಯಲ್ಲಿ ನಮ್ಮ ರಘುಪತಿ ಭಟ್‌ರವರು ಸಮಾಧಾನ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಸಮಾರಂಭಕ್ಕೆ ಹೋಗುವುದಿಲ್ಲವೆಂದು ಹೇಳಿದರು. ಆದರೆ ಇದಕ್ಕೆ ಕಾರಣಕರ್ತರು ಯಾರು ಇದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳಬಹುದು, ಇದಕ್ಕೆ

ಯಾರೂ ಬೇಡವೆನ್ನುವುದಿಲ್ಲ. ಅದನ್ನು ಇವತ್ತು ಜನರಲ್ಲಿ ತಪ್ಪು ಭಾವನೆ ಬರಲಿಕ್ಕೋಸ್ಕರ ನಾವು ರಕ್ಷಣೆ ಕೊಡುತ್ತೇವೆ, ಇದರ ಬಗ್ಗೆ ಮಾತನಾಡುವುದಿದೆ ಎಂದು ಹೇಳುವುದು ಧರ್ಮವಲ್ಲ.

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ್) : ಅಧ್ಯಕ್ಷರೇ, ನಾನು ಇವರ ಮೇಲೆ ಅಲಿಗೇಷನ್ ಮಾಡಲಿಲ್ಲ, ನಾನು ಮುಖ್ಯಮಂತ್ರಿಗಳ ಬಳಿ ಕೇಳಿದ್ದೇನೆಂದರೆ, ಯಾರು ತಪ್ಪನ್ನು ಮಾಡಿದ್ದಾರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ ಎಂದು ಕೇಳಿದ್ದನ್ನು ಬಿಟ್ಟರೆ ಯಾರ ಮೇಲೆಯೂ ಆಪಾದನೆಯನ್ನು ಮಾಡಲಿಲ್ಲ. ಈಗ ಐ.ಎಸ್.ಐ. ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳಿ. ಯಾವ ಸಂಘಟನೆ ಮಾಡಿದ್ದಾರೋ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ. ತಮ್ಮ ಮೇಲೆ ನಾನು ಆಪಾದನೆ ಮಾಡಲಿಲ್ಲ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಅಧ್ಯಕ್ಷರೇ, ಈ ಘಟನೆಗೆ ಸಂಬಂಧಪಟ್ಟವರ ಮೇಲೆ ತನಿಖೆಯಾಗಬಾರದು ಎಂದು ಯಾರು ಹೇಳಲಿಲ್ಲ.

ಅಧ್ಯಕ್ಷರು : ಆಯಿತು, ಬಿಡಿ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ : ಸಭಾಧ್ಯಕ್ಷರೇ, ಈಗ ನಮ್ಮ ರಾಜ್ಯದ, ಜಿಲ್ಲೆಯ ಎಲ್ಲಾ ಜನರಿಗೆ ದೇಶಭಕ್ತಿಯಿದ್ದವರಿಗೆ ನಾವು ರಕ್ಷಣೆಯನ್ನು ಕೊಡುತ್ತೇವೆ. ಯಾವ ರೀತಿ ರಕ್ಷಣೆ ಕೊಡಬೇಕು ಹೇಳಿ, ಯಾವ ರೀತಿ ತ್ಯಾಗ ಮಾಡಿ ಎಂದು ಹೇಳಿ ಆ ರೀತಿ ರಕ್ಷಣೆಯನ್ನು ನಾವು ಕೊಡುತ್ತೇವೆ. ದೇಶಭಕ್ತಿಯಿದ್ದ ಜನರಿಗೆ ರಕ್ಷಣೆಯನ್ನು ಖಂಡಿತವಾಗಿ ನಾವು ಕೊಡುತ್ತೇವೆ. ತಪ್ಪಾಗಿದ್ದರೆ ಹೇಳಿಬಿಡಿ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ರೋಷನ್ ಬೇಗ್‌ರವರು ಗೃಹ ಸಚಿವರಾಗಿ ಕೆಲಸ ಮಾಡಿದಂತಹವರು, ಅವರ ಮಾತಿನಲ್ಲಿ ಅರ್ಥವಿದೆ. ಪೊಲೀಸಿನ ವ್ಯವಸ್ಥೆಯನ್ನು ಸರಿ ಮಾಡದೇ ಹೋದರೆ ಕರಾವಳಿ ಸೂಕ್ಷ್ಮವಾದ ಪ್ರದೇಶವೆಂದು ಎಲ್ಲಾ ಸರ್ಕಾರಗಳಲ್ಲಿ ಅಧಿಕಾರದಲ್ಲಿದ್ದವರು ಪದೇ ಪದೇ ಹೇಳಿದ್ದಾರೆ, ನಾವು ವಿರೋಧ ಪಕ್ಷದಲ್ಲಿದ್ದವರು ಸಹ ಹೇಳಿದ್ದೇವೆ. ಇವತ್ತು ಭಟ್ಕಳದ ಕಥೆಯೇನಾಗಿದೆ ಎಂದರೆ ನಿಮ್ಮ ಮಾತಿಗೆ ನಾನು ಹೇಳುತ್ತೇನೆ, ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಆ ಭಾಗಕ್ಕೆ ಅಟ್ಯಾಚ್ ಆಗಿರತಕ್ಕಂಥವರ ಒಬ್ಬರ ಮನೆಯಲ್ಲಿ ಮದುವೆ ಮಾಡಬೇಕೆಂದರೆ ಬಂಗಾರವನ್ನು ತರಲಿಕ್ಕೆ ನಾವು ಭಟ್ಕಳಕ್ಕೆ ಹೋಗುತ್ತೇವೆ. ವಿದೇಶಿಯ ಚಿನ್ನದ ಬಿಸ್ಕೆಟ್‌ಗಳು, ವಿದೇಶದ ಎಲ್ಲಾ ರೀತಿಯ ವಸ್ತುಗಳು ಅಲ್ಲಿ ಸಿಗುತ್ತವೆ. ಅಲ್ಲಿ ಏನೇನು ಬರುತ್ತದೆ, ಯಾರು ಬರುತ್ತಾರೆ, ಯಾರು ಹೋಗುತ್ತಾರೆ ಎಂಬುದರ ಬಗ್ಗೆ ಬಹಳ ಚೆನ್ನಾಗಿ ಹೇಳಿದರು. ಇದನ್ನು ನಿಗಾ ಇಡದೇ ಹೋದರೆ ರಾತ್ರಿ ಹೊತ್ತು ಲಾಂಚ್‌ಗಳು, ಇವು ಅಲ್ಲಿ ಸಮುದ್ರದ ಕಿನಾರೆಯಲ್ಲಿ ಬರುತ್ತವೆ ಎನ್ನುವುದನ್ನು ಹೇಳಿದಾಗ, ವಿದೇಶಿ ಶಕ್ತಿಗಳು ಅಲ್ಲಿ ಮತ್ತೆ ಆಳಲಿಕ್ಕೆ ಶುರು ಮಾಡಿದಾಗ ಬಹಳ ಕಷ್ಟವಾಗುತ್ತದೆ, ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ವಿನಂತಿಯಿದೆ, ಏಕೆಂದರೆ ಇಡೀ ಪಶ್ಚಿಮ ಘಟ್ಟಗಳು ಈ ಪ್ರಕ್ಷುಬ್ಧವಾಗಿರುವಂಥ

ಪರಿಸ್ಥಿತಿಗೆ ಒಳಗಾಗಬಾರದು, ಇದರಲ್ಲಿ ನಮ್ಮ ಹೊಣೆಗಾರಿಕೆಯಿದೆ, ಜವಾಬ್ದಾರಿಯಿದೆ, ಅಲ್ಲಿರತಕ್ಕಂಥ ಜನರ ಮಾನ, ಪ್ರಾಣ, ಆಸ್ತಿಯನ್ನು ಕಾಪಾಡುವುದು ನಮ್ಮ ಮುಖ್ಯವಾದ ಕರ್ತವ್ಯವಾಗಿದೆ. ಆದ್ದರಿಂದ ಪೊಲೀಸ್ ವ್ಯವಸ್ಥೆಯನ್ನು ಇದಕ್ಕಿಂತ ಹೆಚ್ಚು ಬಿಗಿ ಮಾಡುವಂತಹ ಅವಶ್ಯಕತೆ ಇದೆ. ಒಳ್ಳೊಳ್ಳೆ ಅಧಿಕಾರಿಗಳನ್ನು ಅಲ್ಲಿ ಸೆಲೆಕ್ಟ್ ಮಾಡಿ ಹಾಕುವಂತಹ ಅವಶ್ಯಕತೆಯಿದೆ, ಏನೋ ಘಟನೆ ಆದನಂತರ ಮಹಜರ್ ಮಾಡಿ ಇಪ್ಪತ್ತೈದು, ನೂರು ಕೇಸುಗಳನ್ನು ಹಾಕಿದೆ ಎನ್ನುವುದು ಲೆಕ್ಕಕ್ಕಲ್ಲ, ಇದು ಮಾನದಂಡವಾಗಬಾರದು. ಆದ್ದರಿಂದ ಗಲಭೆ ಆಗದಿದ್ದಾಗ ಪೂರ್ವಯೋಜಿತವಾಗಿರುವಂಥ ತಯಾರು ಮಾಡಿ ಗಲಭೆಯಾಗದೇ ಇರುವಂತಹ ರೀತಿಯಲ್ಲಿ ಮ್ಯಾನೇಜ್ ಮಾಡುವಂತಹ ಪೊಲೀಸ್ ವ್ಯವಸ್ಥೆಯನ್ನು ಅಲ್ಲಿ ಹಾಕಬೇಕೆಂದು ನನ್ನ ವಿನಂತಿಯಿದೆ.

ಅಧ್ಯಕ್ಷರು : ಆಯಿತು, ಖರ್ಗೆಯವರೇ ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಏಕೆಂದರೆ, ಇದು ಅಂತೂ ಆಯಿತು, ಪಾಪ, ಈಶ್ವರಪ್ಪನವರೇ ಒಪ್ಪಿಕೊಂಡಿದ್ದಾರೆ, ನಾನು ಹೆಚ್ಚಿಗೆ ಹೇಳಲಿಕ್ಕೆ ಹೋಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಏನು ಸರ್?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಏನೆಂದರೆ ತಾವು ದೊಡ್ಡ ಮನಸ್ಸು ಮಾಡಿ ಹೇಳಿಬಿಟ್ಟಿರಿ, ತಮ್ಮ ಉಸಿರಲ್ಲಿ ಆರ್.ಎಸ್.ಎಸ್., ತಮ್ಮ ಬ್ಲಡ್‌ನಲ್ಲೂ ಸಂಘ ಪರಿವಾರ, ತಮ್ಮ ಬದುಕಿನ ಭಾಗದಲ್ಲಿ ಕೊಡುವಾಲ್ಕರ್ ಗುರೂಜಿ, ಇವೆಲ್ಲಾ ತಾವು ಹೇಳಕೊಂಡಿದ್ದೀರಿ, ನ್ಯಾಚುರಲಿ, ನಿಮ್ಮ ಬದುಕಿನಲ್ಲಿ, ನಡವಳಿಕೆಯಲ್ಲಿ, ರಕ್ತದಲ್ಲಿ ಎಲ್ಲಾ ಇದು ಇದ್ದ ಮೇಲೆ ಆಡಳಿತದಲ್ಲಿ ಖಂಡಿತವಾಗಿ ಇದು ಬರುತ್ತದೆ. ನೀವು ಹೇಳಿದ್ದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಏನಾಗುತ್ತದೆ ಸರ್, ನಿಮ್ಮ ಆಪಾದನೆ ಏನು? ಹೇಳುತ್ತೇನೆ, ನಾನು ಕುಡುಕ ಅಲ್ಲ, ಲಫಂಗ ಅಲ್ಲ, ನಾನು ಇಸ್ಪೀಟನ್ನು ಆಡುವುದಿಲ್ಲ. ಇದೆಲ್ಲಾ ಕಲಿಸಿಕೊಟ್ಟಿದ್ದು ನನಗೆ ಆರ್.ಎಸ್.ಎಸ್. ಇದರ ಬಗ್ಗೆ ನನಗೆ ಹೆಮ್ಮೆ ಇದೆ. ನನ್ನದು ನಾನು ಹೇಳಿಕೊಳ್ಳುತ್ತೇನೆ, ಬೇರೆಯವರದು ಹೇಳುವುದಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಸರ್, ಒಬ್ಬೊಬ್ಬರಿಗೆ ಒಂದೊಂದು ಗುರು ಇರುವ ಹಾಗೆ ನನಗೆ ಆರ್.ಎಸ್.ಎಸ್. ಗುರು.

ಶ್ರೀ ಧರಂಸಿಂಗ್ : ಈ ದೇಶದಲ್ಲಿ ಮಹಾತ್ಮ ಗಾಂಧಿಯವರ ತಲೆ ತೆಗೆದವರೇ ನಿಮ್ಮ ಆರ್.ಎಸ್.ಎಸ್.ನವರು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಸರ್, ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಪ್ರತಿ ಪಕ್ಷದ ನಾಯಕರು ಈ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಈಗಾಗಲೇ ನಿಮ್ಮ ಮೇಲೆ ಕೇಸ್ ಹಾಕಿದೆ.

ಶ್ರೀ ಧರಂಸಿಂಗ್ : ಯಾರು ತೋರಿಸಿ ಯಾರು?

ಶ್ರೀ ಕೆ.ಎಸ್. ಈಶ್ವರಪ್ಪ : ಯಾರು ಯಾರು? ಅಂದರೆ ನಾನು ಹೇಳುತ್ತೇನೆ. ನಿಮಗೆ ಯಾವ ಮರ್ಯಾದೆ ಇಲ್ಲ, ಕಾಂಗ್ರೆಸ್ಸಿನವರಿಗೆ ಮರ್ಯಾದೆ ಇಲ್ಲ. ನಿಮ್ಮ ಯೋಗ್ಯತೆಯನ್ನು ಕಾಪಾಡಿಕೊಳ್ಳಿ, ಮರ್ಯಾದೆ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಆರ್.ಎಸ್.ಎಸ್. ಬಗ್ಗೆ ಮಾತನಾಡಲಿಕ್ಕೆ ನಿಮಗೆ ಯೋಗ್ಯತೆಯಿಲ್ಲ.

(ಗೊಂದಲ)

ಅಧ್ಯಕ್ಷರು : ಏಕಿಷ್ಟು ಉದ್ದೇಗಕ್ಕೆ ಒಳಗಾಗುತ್ತಿದ್ದೀರಿ, ಸುಮ್ಮನಿರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಪ್ರತಿಪಕ್ಷದ ನಾಯಕರು ಈ ರೀತಿಯ ಬೇಜವಾಬ್ದಾರಿ ಹೇಳಿಕೆಯನ್ನು ಕೊಡುವುದು ಸರಿಯಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಭಟ್ಕಳದಲ್ಲಿ ಶಾಂತಿಯಿಂದಿರುವುದು ಇವರಿಗೆ ಸಮಾಧಾನವಿಲ್ಲ.

(ಗೊಂದಲ)

ಅಧ್ಯಕ್ಷರು : ಈಶ್ವರಪ್ಪರವರೇ, ನೀವೆಲ್ಲಾ ಕುಳಿತುಕೊಳ್ಳಿ ಮೊದಲು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮೊದಲು ಆ ಮಾತನ್ನು ಕಡತದಿಂದ ವಾಪಸ್ಸು ತೆಗೆಸಿ, ನಾನು ಕೂರುತ್ತೇನೆ. ಮೊದಲು ಆ ಮಾತನ್ನು ಕಡತದಿಂದ ವಾಪಸ್ ತೆಗೆಸಿ.

ಅಧ್ಯಕ್ಷರು : ದಯಮಾಡಿ ಯಾರೂ ಉದ್ವೇಗಕ್ಕೆ ಒಳಗಾಗಬಾರದು, ನಿಮ್ಮ ಪೊಲಿಟಿಕಲ್ ಫಿಲಾಸಫಿ ಏನೇ ಇರಲಿ, ಅದನ್ನು ಹೇಳಿಕೊಳ್ಳಲಿಕ್ಕೆ ಬೇಕಾದಷ್ಟು ವೇದಿಕೆಗಳಿವೆ, ಇಲ್ಲಿ ನಿಮ್ಮ ಪೊಲಿಟಿಕಲ್ ಫಿಲಾಸಫಿಗಳನ್ನು ತಂದುಕೊಂಡು ಪರಸ್ಪರ ನಿಮ್ಮ ಮೇಲೆ ಅವರು, ಅವರ ಮೇಲೆ ನೀವು, ಈ ಕೆಸರು ಎರಚುಕೊಳ್ಳುವುದಿದೆಯಲ್ಲಾ ಇದು ಯಾರಿಗೂ ಶೋಭೆ ತರುವಂತಹುದಲ್ಲ. ಈ ಮನೆಗಂತೂ ಶೋಭೆಯನ್ನು ತರುವುದಿಲ್ಲ. ದಯಮಾಡಿ ನಿಮ್ಮ ನಿಮ್ಮ ಭಾವನೆಗಳನ್ನು ಹೇಳಿ, ಆ ಭಟ್ಕಳದಲ್ಲಿ ಏನು ನಡೆಯಿತು, ಆ ಬಗ್ಗೆ ನಿಮಗೆ ಗೊತ್ತಿರುವ ಇನ್ಫಾರ್ಮೇಷನ್ ಏನು, ಹೇಗೆ? ದಯಮಾಡಿ ಚಾರ್ಜಸ್ ಫ್ರೇಮ್ ಮಾಡಿಕೊಳ್ಳತಕ್ಕಂಥದ್ದು ಯಾರಿಗೂ ಶೋಭೆ ತರುವಂಥದ್ದಲ್ಲ. ನೋ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ದಯಮಾಡಿ, ಒಂದು ನಿಮಿಷ, ಸರ್, ಅವರು ಒಂದು ಆಪಾದನೆಯನ್ನು ಮಾಡಿದ್ದಾರೆ, ಸ್ವಲ್ಪ ತಡೆಯಿರಿ, ಸರ್ ಈಗ ಗಾಂಧೀಜಿಯವರ

ಹತ್ಯೆಯಾದಾಗ ಕೇಂದ್ರ ಸರ್ಕಾರ ಒಂದು ಆಯೋಗವನ್ನು ನೇಮಕ ಮಾಡಿದೆ, ಆ ಆಯೋಗ ತುಂಬಾ ಸ್ಪಷ್ಟವಾಗಿ ಹೇಳಿದೆ, ಆರ್.ಎಸ್.ಎಸ್.ಗೂ ಆ ಗಾಂಧಿಯವರ ಹತ್ಯೆಗೂ ಸಂಬಂಧವಿಲ್ಲವೆಂದು ತುಂಬಾ ಸ್ಪಷ್ಟವಾಗಿ ಹೇಳಿದೆ. ಹಾಗಾಗಿ ಕಡತದಿಂದ ಆ ಮಾತನ್ನು ವಾಪಸ್ಸು ತೆಗೆಯಬೇಕು.

ಅಧ್ಯಕ್ಷರು : ಅದೆಲ್ಲಾ ಹಳೆಯ ಕಥೆ, ಏಕೆ ಈಗ ಹಳೆಯ ಕಥೆಗಳನ್ನು ಹೇಳುತ್ತೀರಿ? ಅವೆಲ್ಲಾ ಬಹಳ ಹಿಂದೆ ನಡೆದಿರುವುದು. ಈಗ ಬೇಡ. ಸುಮ್ಮನಿರಿ. ಈಗ ಭಟ್ಕಳದ ಬಗ್ಗೆ ಮಾತನಾಡಿ.

(**ಗೊಂದಲ**)

ಶ್ರೀ ಕೆ.ಎಸ್. ಈಶ್ವರಪ್ಪ : ಈಗ ವಿರೋಧ ಪಕ್ಷದ ನಾಯಕರು ಸುಮ್ಮಸುಮ್ಮನೆ ಆಪಾದನೆಯನ್ನು ಮಾಡಿದ್ದಾರೆ. ದಯವಿಟ್ಟು ಆ ಮಾತನ್ನು ವಾಪಸ್ಸು ತೆಗೆಸಿ, ಇಲ್ಲ ಇದರ ಬಗ್ಗೆ ತನಿಖೆಯಾಗಲಿ, ಗಾಂಧೀಜಿಯವರ ಕೊಲೆ ಮಾಡಿದ್ದು ಯಾರು ಎಂಬ ಬಗ್ಗೆ ತನಿಖೆ ಮಾಡಿಸಿ, ನಾವು ಬೇಡವೆನ್ನುವುದಿಲ್ಲ. ಆದರೆ ಇವತ್ತು ಸುಮ್ಮನೆ ಆಪಾದನೆ ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಪ್ರತಿಪಕ್ಷದ ನಾಯಕರು ಸುಮ್ಮಸುಮ್ಮನೆ ಸುಳ್ಳು ಆರೋಪ ಮಾಡಿ ಹೇಳಿಕೆ ಕೊಡಬಾರದು. ಬೇಜವಾಬ್ದಾರಿಯಿಂದ ಹೇಳಿಕೆ ಕೊಡುವಂತಹದ್ದು ಆಗಬಾರದು.

(**ಗೊಂದಲ**)

ಶ್ರೀ ಕೆ.ಎಸ್. ಈಶ್ವರಪ್ಪ : ಭಟ್ಕಳದಲ್ಲಿ ಶಾಂತಿಯಿರುವುದು ಇವರಿಗೆ ಸಮಾಧಾನವಿಲ್ಲ. ದಯವಿಟ್ಟು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮಾನ್ಯ ಅಧ್ಯಕ್ಷರೇ, ಒಂದು ವಿರೋಧ ಪಕ್ಷದ ನಾಯಕರು ಕ್ಷಮೆ ಕೇಳಬೇಕು, ಎರಡನೆಯದು ಅವರ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಒಂದು ವಿರೋಧ ಪಕ್ಷದ ನಾಯಕರಿಗೆ ಶೋಭೆ ತರುವಂತಹ ಮಾತಲ್ಲ ಅದು.

(**ಗೊಂದಲ**)

ಶ್ರೀ ಧರಂಸಿಂಗ್ : ನಾನು ಏತಕ್ಕೆ ಕ್ಷಮೆ ಕೇಳಬೇಕು, ನಾನು ಕೇಳುವುದಿಲ್ಲ. ಈ ಮಾತನ್ನು ಮೊದಲನೇ ಬಾರಿ ಹೇಳುತ್ತಿಲ್ಲ, ಎಷ್ಟೋ ಸಲ ಈ ಮಾತನ್ನು ನಾನು ಹೇಳಿದ್ದೇನೆ. ಈಗಾಗಲೇ ಹೈಕೋರ್ಟ್‌ನಲ್ಲಿ ಇದರ ಬಗ್ಗೆ ಕೇಸಿದೆ. ಇದ್ದಿದ್ದನ್ನು ನಾನು ಹೇಳಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ನೂರ ಸಲ ಹೇಳಿ, ಇವತ್ತು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಂಡು ಅಧಿಕಾರವನ್ನು ಕಳೆದುಕೊಂಡ ಮೇಲೆ ಭಟ್ಕಳದಲ್ಲಿ ಶಾಂತಿಯಿರುವುದು ಇವರ್‍ಯಾರಿಗೂ ಸಮಾಧಾನವಿಲ್ಲ.

ಶ್ರೀ ಧರಂಸಿಂಗ್ : ನಾವು ಅಧಿಕಾರಕ್ಕೋಸ್ಕರ ನಿಮ್ಮ ಹಾಗೆ ನಾವು ಬೆನ್ನತ್ತಿ ಬಂದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಕರ್ನಾಟಕ ರಾಜ್ಯದಲ್ಲಿ ಹಿಂದೂ ಮುಸ್ಲಿಂ ಗಲಭೆಯನ್ನು ಮಾಡಿಸುತ್ತಿರುವವರೇ ನೀವು. ರಾಮನಗರದಲ್ಲಿ ಗಲಭೆ ಮಾಡಿಸುತ್ತಿರುವವರೇ ಕಾಂಗ್ರೆಸ್‌ನವರು, ವೀರೇಂದ್ರ ಪಾಟೀಲರವರನ್ನು ಮುಖ್ಯಮಂತ್ರಿ ಸ್ಥಾನದಿಂದ ತೆಗೆಸಿದವರು ಇವರೇ, ಅವರವರಲ್ಲೇ ಅಧಿಕಾರವನ್ನು ಕಳೆದುಕೊಂಡು ಕಾಂಗ್ರೆಸ್ಸಿನವರು ಈ ರಾಜ್ಯದಲ್ಲಿ ಹಿಂದೂ ಮುಸ್ಲಿಂ ಗಲಭೆಯನ್ನು ತರುತ್ತಿರುವವರೇ ಇವರು. ಸರ್, ದಯವಿಟ್ಟು ಆ ಮಾತನ್ನು ಕಡತದಿಂದ ವಾಪಸ್ ತೆಗೆಸಿ.

ಅಧ್ಯಕ್ಷರು : ಆಯಿತು, ಆಯಿತು ನಾನು ಕಡತದಿಂದ ಆ ಮಾತನ್ನು ವಾಪಸ್ಸು ತೆಗೆಸುತ್ತೇನೆ ಬಿಡಿ. ಈಗ ಕಡತದಿಂದ ಅದೇನಿದೆ ನೋಡಿಬಿಟ್ಟು ತೆಗೆಸುತ್ತೇನೆ. ದಯಮಾಡಿ ಕೇಳಿ. ಈಗ ಏನೆಂದರೆ ಖರ್ಗೆಯವರೇ ಈಗ ಭಟ್ಕಳಕ್ಕೆ ಸೀಮಿತವಾಗಿ ನಿಮ್ಮಲ್ಲಿ ಏನು ಮಾಹಿತಿಯಿದೆ, ಅದನ್ನು ಮಾತನಾಡಿ, ಉಳಿದ ವಿಚಾರವನ್ನು ಏತಕ್ಕೆ ಮಾತನಾಡುತ್ತೀರಿ?

ಅಧ್ಯಕ್ಷರು : ಆಯಿತು ಈಗ ನಾನು ಕಡತದಿಂದ ತೆಗೆಸುತ್ತೇನೆ. ಅದೇನು ಇದೆ ಅಂತ ನೋಡಿ ಕಡತದಿಂದ ತೆಗೆಸುತ್ತೇನೆ. ದಯಮಾಡಿ ಕೇಳಿ, ನಾನು ಕಡತದಿಂದ ತೆಗೆಸುತ್ತೇನೆ. ಈಗ ಏನಪ್ಪ ಅಂದ್ರೆ ಭಟ್ಕಳಕ್ಕೆ ಸೀಮಿತವಾಗಿ ಈಗ ಏನು ಮಾಹಿತಿ ಇದೆ ಅದನ್ನು ಮಾತನಾಡಿ. ಉಳಿದ ವಿಚಾರವೆಲ್ಲಾ ಏಕೆ?

ಶ್ರೀ ಕೆ.ಎಸ್. ಈಶ್ವರಪ್ಪ : ಎಲ್ಲೂ ಕೇಸ್ ಇಲ್ಲ, ಬರೀ ಸುಳ್ಳು ಹೇಳುವುದು.

ಶ್ರೀ ಎನ್. ಧರ್ಮಸಿಂಗ್ : ಎಲ್ಲೋ ಕೇಸ್ ಇದೆ ಅದೆಲ್ಲಾ ನಿಮಗೆ ಏಕೆ ಬೇಕು?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ ಮುಂದೆ ಕರ್ನಾಟಕ ರಾಜ್ಯದಲ್ಲಿ ಯಾವುದೇ ಹಿಂದೂ ಮುಸ್ಲಿಂ ಗಲಾಟೆಯಾದರೆ ಅದಕ್ಕೆ ನೀವೇ ಕಾರಣರಾಗುತ್ತೀರಿ. ಯಾವುದೇ ಗಲಾಟೆಯಾಗಲಿ ಅದಕ್ಕೆ ನೀವೇ ಕಾರಣ. ನೀವು ಅಧಿಕಾರವನ್ನು ಕಳೆದುಕೊಂಡು ಇರುವುದರಿಂದ ನಿಮಗೆ ಸಮಾಧಾನವಾಗಿಲ್ಲ. ಹಿಂದೂ ಮುಸ್ಲಿಂ ಗಲಾಟೆಗಳಾದರೆ ಅದಕ್ಕೆ ಕಾಂಗ್ರೆಸ್ಸ್‌ನವರೇ ಕಾರಣರಾಗುತ್ತೀರಿ. ಮಾನ್ಯ ಅಧ್ಯಕ್ಷರೇ, ದಯವಿಟ್ಟು ಅವರು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ನಾನು ನೋಡುತ್ತೇನೆ. ನಾನುನೋಡಿ, ರೆಕಾರ್ಡ್‌ನ್ನು ನೋಡಿ ಬಿಟ್ಟು ಆ ಪ್ರೊಸಿಡಿಂಗ್ಸ್‌ನಲ್ಲಿ ಏನು ತೆಗೆಸಬೇಕೋ ಅದನ್ನು ತೆಗೆಸುತ್ತೇನೆ. ಈಗ ನೀವು ಇದಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ ದಯವಿಟ್ಟು ಅವರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮಾನ್ಯ ವಿರೋಧ ಪಕ್ಷದ ನಾಯಕರ ಬಾಯಲ್ಲಿ ಬರುವಂತಹ ಮಾತಲ್ಲ ಇದು. ದಯವಿಟ್ಟು ವಾಪಸ್ಸು ತೆಗೆಸಿ.

ಅಧ್ಯಕ್ಷರು : ಈಗ ನಾನು, ಪ್ರೊಸಿಡಿಂಗ್ಸ್ ನೋಡಿ ಅದನ್ನು ಏನು ಆಡಬಾರದ ಮಾತನ್ನು ಆಡಿದ್ದರೆ ಅದನ್ನು ತೆಗೆಸುತ್ತೇನೆ, ದಯಮಾಡಿ ಕುಳಿತುಕೊಳ್ಳಿ. ಸಹಕರಿಸಿ,

ಸುಮ್ಮನೇ ನೀವು ಅದನ್ನೇ ಹಿಡಿದುಕೊಂಡು ಕುಳಿತುಕೊಂಡರೆ ಹೇಗೆ? ಈಗ ಅನೇಕ ಸ್ಪಷ್ಟೀಕರಣಗಳು ಆದ ಮೇಲೆ ನೀವೆಲ್ಲಾ ಸ್ಪಷ್ಟೀಕರಣ ಕೇಳಿದ್ದೀರಿ. ಈಗ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ಹಣೆಬರಹ ಗೊತ್ತಿದೆ. ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ತಪ್ಪು ತಿಳುವಳಿಕೆಯಾಗಬಾರದು. ಪತ್ರಿಕೆಗಳಿಗೆ ಮತ್ತು ಜನರಿಗೆ ಬೇರೆ ಮಾಹಿತಿ ಹೋಗಬಾರದು. ನಾನು ಏನು ಮಾತನಾಡಿದೆ? ಅವರು ಹೇಳಿದ್ದನ್ನೇ ನಾನು ರಿಪೀಟ್ ಮಾಡಿದೆ, ನಾನು ಏನಾದರೂ ಅವರ ಮೇಲೆ ಅಲಿಗೇಶನ್ ಮಾಡಿ ಚುಚ್ಚಿ ಮಾತನಾಡಿದ್ದರೆ ಆ ಮಾತು ಬೇರೆ. ಅವರೇ ಹೇಳಿದ್ದು, ಏನು "ನನ್ನ ರಕ್ತದಲ್ಲಿ ಆರ್ ಎಸ್ ಎಸ್ ಇದೆ. ನನ್ನ ಶ್ವಾಸದಲ್ಲಿ ಸಂಘ ಪರಿವಾರವಿದೆ", ಆ ಐಡಲಾಜಿಯಲ್ಲಿ ಶ್ರೀ ಗೊರವಾಂಕರ್ ಗುರೂಜಿ ಇದ್ದಾರೆ ಅಂತ ಅವರು ಹೇಳಲಿಲ್ಲ ನಾನು ಹೇಳಿದೆ. ಇದು ಒಂದು ಬಿಟ್ಟರೆ ಬೇರೆ ಏನು ಹೇಳಿದೆ. ಅದು ಒಂದು ಹೋಗಲಿ, ಮತ್ತು ಅದಕ್ಕೆ ಅವರು "ಆವೇಶದಲ್ಲಿ ನಾನು ಕುಡಿಯುವುದಿಲ್ಲ ನಾನು ತಿನ್ನುವುದಿಲ್ಲ ನಾನು 'ಇಸ್ಪೀಟ್ ಆಡುವುದಿಲ್ಲ" ಎಂದು ಹೇಳಿದರು. ಅವೆಲ್ಲಾ ಹೋಗಿ ನಿಮ್ಮಲ್ಲಿ ಕೇಳ್ರಿ, ಯಾರು ನಿಮ್ಮ ಪಾರ್ಟಿಯಲ್ಲಿದ್ದಾರೆ, ಅಂತಹವರು ಅಂತ ಕೇಳಿ, ಸ್ವಲ್ಪ ಕೇಳಿ......

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಅದನ್ನೇ ಕೇಳುತ್ತಿದ್ದೇನೆ. ಅದನ್ನೇ ನಾನು ಹೇಳುತ್ತಿದ್ದೇನೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಏನಂದರು? ಅವರು ಅವರ ಸ್ಥಾನಕ್ಕೆ ತಕ್ಕಂತಹ ಮಾತನ್ನು ಆಡಿದರೇ? ಒಬ್ಬ ವಿರೋಧ ಪಕ್ಷದ ನಾಯಕರಾಗಿ ಅವರ ಸ್ಥಾನಕ್ಕೆ ತಕ್ಕಂತೆ ಅವರು ಮಾತನ್ನು ಆಡಿದ್ದಾರಾ? ಅವರು ಯಾವ ಆಯೋಗ ಇದೆ ಅಂತ ಹೇಳಲಿ, ಆ ಆಯೋಗ ಏನು ತೀರ್ಪು ಕೊಟ್ಟಿದ್ದಾರೆಂದು ಹೇಳಲಿ, ಅದನ್ನು ಬಿಟ್ಟು ನೀವು ವಿರೋಧ ಪಕ್ಷದ ನಾಯಕರಾಗಿ ಆ ಸ್ಥಾನದಲ್ಲಿರಲು ಯೋಗ್ಯರೇ ಎನ್ನವುದನ್ನು ಯೋಚನೆ ಮಾಡಿ. ಒಂದು ವಿರೋಧ ಪಕ್ಷದ ನಾಯಕರಾಗಿ ಆ ಸ್ಥಾನಕ್ಕೆ ತಕ್ಕಂತೆ ಮಾತನಾಡುವುದನ್ನು ಕಲಿಯಿರಿ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ : ನಾನು ಈ ಹಿಂದೆಯು ಸಹ ಅನೇಕ ಸಲ ಈ ಮಾತು ಹೇಳಿದ್ದೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ ನಾವು 79 ಜನ ಗೆದ್ದು ಬಂದಿರುವುದೇ ಆ ಸಿದ್ಧಾಂತದಿಂದ. ನೀವು ಆ ಕುರ್ಚಿಗೆ ಇರುವ ಯೋಗ್ಯತೆ ತಕ್ಕಂತೆ ಮಾತನಾಡಿ. ನಿಮ್ಮ ಯೋಗ್ಯತೆಗೆ ತಕ್ಕಂತೆ ಮಾತನಾಡಿ.

ಅಧ್ಯಕ್ಷರು : ಭಾವೋದ್ವೇಗಕ್ಕೆ ಒಳಗಾಗಬೇಡಿ ದಯಮಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಈಶ್ವರಪ್ಪನವರೇ.....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಅವರಿಗೆ ಹೇಳಿ ಸ್ವಲ್ಪ ಮುಂಚೆ. ದೊಡ್ಡವರಿಗೆ ಹೇಳಿ ಮುಂಚೆ. ನಾನು ಚಿಕ್ಕವನು, ದೊಡ್ಡವರಿಗೆ ಹೇಳಿ ಮುಂಚೆ.

ಶ್ರೀ ವಾಟಾಳ್ ನಾಗರಾಜ್ : ತಾವು ಸಚಿವರು, ತಾವು ಸಚಿವರಾಗಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ : ಹೌದು, ಆದರೆ ಅವರು ಯಾರ ಬಗ್ಗೆ ಮಾತನಾಡುತ್ತಿದ್ದಾರೆ. ಯಾವ ಸಂಸ್ಥೆಯ ಬಗ್ಗೆ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ತಾವು ಸಚಿವರಾಗಿದ್ದೀರಿ. ತಾವು ಸಚಿವರಾಗಿದ್ದೀರಿ..... ಜವಾಬ್ದಾರಿ .....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಾಗರಾಜ್‌ರವರೇ ಸ್ವಲ್ಪ ತಡೆಯಿರಿ. ನನ್ನ ತಾಯಿ ತಂದೆಗೆ ಯಾರಾದರೂ ಬೈದರೆ ಹೇಗೆ ಸಿಟ್ಟು ಬರುತ್ತದೆಯೋ ಅದೇ ರೀತಿ ಆರ್ ಎಸ್ ಎಸ್ ಬಗ್ಗೆ ಬೈದರೆ ನನಗೆ ಅದೇ ಸಿಟ್ಟು ಬರುತ್ತದೆ. ಅವರು ಏನು ಹೇಳಿದ್ದು, ಗಾಂಧೀಜಿಯನ್ನು ಕೊಲೆ ಮಾಡಿದ್ದು ಯಾರು ಅಂತ ಕೇಳಿದರು, ಅದನ್ನು ಒಪ್ಪುತ್ತೀರಾ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಒಂದು ನಿಮಿಷ, ದಯಮಾಡಿ ಅಲ್ಲಿ ಖರ್ಗೆಯವರು....

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ಭಟ್ಕಳದ ಬಗ್ಗೆ ಚರ್ಚೆ ನಿಮ್ಮ ಸ್ಪಷ್ಟೀಕರಣ ಎಲ್ಲಾ ಮುಗಿದಿದೆ. ಈಗ ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರ ಕೊಡುತ್ತಾರೆ. ದಯಮಾಡಿ ಯಾರೂ ಮಧ್ಯೆ ನಿಂತುಕೊಳ್ಳಬೇಡಿ. ಇದು ಎಲ್ಲರಿಗೂ ಅನ್ವಯವಾಗುತ್ತದೆ. ಈಗ ತಾವು ಕಳಸಾ ಭಂಡೂರಿ ವಿಷಯ ತೆಗೆದುಕೊಳ್ಳಬೇಕು. ಇದಾದ ಮೇಲೆ ಗೋಮಾಳ ಜಮೀನು ವಿಚಾರ ಇದೆ. ಅದೂ ಗಂಭೀರವಾದುದು. ದಯಮಾಡಿ ಇದನ್ನು ಮುಗಿಸಿ. ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ. ದಯಮಾಡಿ ಕುಳಿತುಕೊಳ್ಳಿ, ಮುಂದುವರಿಸಿಕೊಂಡು ಹೋಗುವುದು ಬೇಡ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಭಟ್ಕಳ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಏನು ಅಲ್ಲಿ ಕೋಸ್ಟಲ್ ಬೆಲ್ಟ್‌ನಲ್ಲಿ ಸೆಕ್ಯುರಿಟಿ ಇನ್ನೂ ಜಾಗ್ರತವಾಗಿರುವುದಕ್ಕೆ ಸರ್ಕಾರ ಕೆಲವು ನಿರ್ಧಾರಗಳನ್ನು ಮಾಡಬೇಕು ಅಂತ ಏನು ಹೇಳಿದರು, ಆ ಬಗ್ಗೆ ಹೇಳುವುದಾದರೆ, ಈಗಾಗಲೇ ಅಲ್ಲಿ ಕರಾವಳಿ ರಕ್ಷಣಾ ಪಡೆಗೆ ಐ.ಜಿ.ಪಿ. ಯವರ ನೇತೃತ್ವದಲ್ಲಿ ಕರ್ತವ್ಯವನ್ನು ಏನು ನಿರ್ವಹಿಸುತ್ತಿದ್ದಾರೆ ಇಬ್ಬರು

ಎಸಿಪಿಗಳನ್ನು ಆ ಒಂದು ಭಾಗದಲ್ಲಿ ಡೆಪ್ಯುಟ್ ಮಾಡಿರತಕ್ಕಂಥಾದ್ದು ಏನಿದೆ, ಇನ್ನೂ ಹೆಚ್ಚಿಗೆ ಆ ಭಾಗದ ಸೂಕ್ಷ್ಮತೆಯನ್ನು ಗಮನದಲ್ಲಿಟ್ಟುಕೊಂಡು ಇವತ್ತು ಅಲ್ಲಿ ನಾವು ಕಾನೂನು ಪರಿಸ್ಥಿತಿಯನ್ನು ಸರಿಪಡಿಸಲು ಹೆಚ್ಚಿನ ಸಿಬ್ಬಂದಿಯನ್ನು ಹಾಕುವುದರ ಜೊತೆಗೆ, ಪ್ರತಿನಿತ್ಯ ಅಲ್ಲಿ ಆಗತಕ್ಕಂಥ ಘಟನೆಗಳ ಬಗ್ಗೆ ಗಂಭೀರವಾಗಿ ನಮ್ಮ ಅಧಿಕಾರಿಗಳು ಗಮನಹರಿಸುವಂತೆ ನಾನು ಸೂಚನೆಯನ್ನು ಕೊಡುತ್ತೇನೆ. ಇವತ್ತು ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗ್ಡೆಯವರು ಇರಬಹುದು, ಮಾನ್ಯ ಸದಸ್ಯರಾದ ರೋಶನ್ ಬೇಗ್‌ರವರು ಇರಬಹುದು, ಏನು ಈ ಒಂದು ವಿಷಯದಲ್ಲಿ ಸ್ವಲ್ಪ ಸರ್ಕಾರ ಜಾಗ್ರತೆಯನ್ನು ವಹಿಸಬೇಕು ಎಂದು ಏನುಹೇಳಿದ್ದಾರೆ, ಅದರ ಬಗ್ಗೆ ಅತ್ಯಂತ ಜಾಗ್ರತರಾಗಿ ಇವತ್ತು ಅಧಿಕಾರಿಗಳು ಕೆಲಸ ಮಾಡಲಿಕ್ಕೆ ಇನ್ನೂ ಹೆಚ್ಚಿನ ಒಂದು ಗಮನವನ್ನು ಕೊಡಲು ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ಈ ಭಟ್ಕಳ ಘಟನೆಗೆ ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಏನು ಪೊಲೀಸ್‌ನವರು ಅವರ ಒಂದು ಕಾರ್ಯವನ್ನು ನಿರ್ವಹಿಸುವುದರಲ್ಲಿ ಸ್ವಲ್ಪ ಲೋಪದೋಷಗಳು ಆಗಿವೆ ಎನ್ನುವುದನ್ನು ಏನು ನನ್ನ ಗಮನಕ್ಕೆ ತಂದಿದ್ದಾರೆ, ಅದು 22ನೇ ತಾರೀಖು ಇದರ ಬಗ್ಗೆ ಏನೊಂದು ವಿಷಯ ಚರ್ಚೆಯಾಯಿತು, ಆಗಲೇ ಅವರು ನಿಗಾ ವಹಿಸಬೇಕಾಗಿತ್ತು. ಅಂತ ಏನು ಹೇಳಿದ್ದಾರೆ, ಈ ವಿಷಯದಲ್ಲಿ ಪೊಲೀಸ್ ಇಲಾಖೆಯವರು ನಿಗಾ ವಹಿಸಿದರೂ ಕೆಲವು ತಿಳಿಗೇಡಿ ವ್ಯಕ್ತಿಗಳು ಏನು ಅಲ್ಲಿ ಇಂತಹ ಒಂದು ವಿಷಯದಲ್ಲಿ ಅಮಾಯಕರನ್ನು ದಿಕ್ಕು ತಪ್ಪಿಸತಕ್ಕಂಥಾದ್ದು, ಏನಾಗುತ್ತದೆ, ಕೆಲವರು ಇಂತಹ ಘಟನೆಗಳಿಗೆ ಏನು ಕಾರಣಕರ್ತರಾಗಿರುತ್ತಾರೆ ಇನ್ನು ಮುಂದಕ್ಕೆ ಇಂತಹ ಘಟನೆಗಳು ಆಗದೇ ಇರಲು ನಾನು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇನೆ. ಭಟ್ಕಳ ವಿಷಯದಲ್ಲಿ ಏನು ಹಲವಾರು ವರ್ಷಗಳಿಂದ ನಡೆಯುತ್ತಿರತಕ್ಕಂಥ ಘಟನೆಗಳು ಏನಿವೆ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡೆ ಮುಂದಿನ ದಿನಗಳಲ್ಲಿ ಈ ರೀತಿಯ ಘಟನೆಗಳು ಪುನರಾವರ್ತನೆಯಾಗದೇ ಇರತಕ್ಕಂಥಾದ್ದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಈಗ ಕಳಸಾ ಬಂಡೂರಿ ವಿಷಯವನ್ನು ತೆಗೆದುಕೊಳ್ಳೋಣ. ಅದಾದ ಮೇಲೆ ಗೋಮಾಳದ್ದು ತೆಗೆದುಕೊಳ್ಳುತ್ತೇನೆ. ದಯಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ ಬಹಳ ಸೂಕ್ಷ್ಮವಾದ ವಿಷಯ ಈದ್ಗಾ. ಮಾನ್ಯ ಮುಖ್ಯಮಂತ್ರಿಗಳು ಇರಲಿಲ್ಲ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳೇ ಈದ್ಗಾ ವಿಚಾರದಲ್ಲಿ ಅಡ್ಜನ್‌ಮೆಂಟ್ ತೆಗೆದುಕೊಳ್ಳಬೇಕೆನ್ನುವುದೇ ಎಲ್ಲರ ಮನವಿ. ಆದ್ದರಿಂದ ಅದು ಏನಾಯಿತು ಎನ್ನುವುದನ್ನು ಸಭೆಯ ಗಮನಕ್ಕೆ ತಂದರೆ ಒಳ್ಳೆಯದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು. ಭಟ್ಕಳ ಮುನಿಸಿಪಾಲಿಟಿಯ ಉಪಾಧ್ಯಕ್ಷರ ಬಗ್ಗೆ ಪ್ರಸ್ತಾಪ

ಮಾಡಿದರು. ಆ ಬಗ್ಗೆ ತಾವು ಸ್ವಲ್ಪ ಮಾಹಿತಿಯನ್ನು ಕೊಟ್ಟರೆ ಒಳ್ಳೆಯದು. ಅದು ಒಂದು ಮಾದರಿಯಾಗುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೇ, ಯಾವುದೇ ವ್ಯಕ್ತಿಗಳು ಇರಲಿ ಕಾನೂನಿಗೆ ವಿರುದ್ಧವಾಗಿ ಕೆಲಸ ಮಾಡತಕ್ಕಂಥವರು ಯಾವುದೇ ವ್ಯಕ್ತಿಗಳು ಇರಲಿ, ಅವರ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚನೆಯನ್ನು ಕೊಡುತ್ತೇನೆ. ಇದರಲ್ಲಿ ಆ ವ್ಯಕ್ತಿಯ ಬ್ಯಾಕ್‌ಗ್ರೌಂಡ್, ಅವರು ಆ ಪಕ್ಷಕ್ಕೆ ಸೇರಿದವರು, ಈ ಪಕ್ಷಕ್ಕೆ ಸೇರಿದವರು ಎನ್ನುವ ಪ್ರಶ್ನೆ ಇಲ್ಲ. ಯಾವುದೇ ವ್ಯಕ್ತಿಗಳು ಇರಲಿ ಕಾನೂನಿಗೆ ವಿರುದ್ಧವಾಗಿ ಕೆಲಸ ಮಾಡುವವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಸೂಚನೆ ಕೊಡುತ್ತೇನೆ. ಈದ್ಗಾ ವಿಷಯದಲ್ಲಿ ಆ ಭಾಗದ ಮಾನ್ಯ ಸದಸ್ಯರಾದ ಜಬ್ಬಾರ್ ಖಾನ್ ಹೊನ್ನಾಳಿಯವರು ಮತ್ತು ಮಾನ್ಯ ಸದಸ್ಯರಾದ ಹಿಂಡಸಗೇರಿಯವರು ಬಂದು ನನ್ನ ಜೊತೆ ಚರ್ಚೆ ಏನು ಮಾಡಿದರು. ಹಿರಿಯರಾದ ಮಾನ್ಯ ಜಾಫರ್ ಷರೀಫ್‌ರವರು ಸಹ ನನ್ನ ಜೊತೆ ಚರ್ಚೆ ಮಾಡಿದ ನಂತರ ಸರ್ಕಾರದಿಂದ ಸ್ವಲ್ಪ ಕಾಲಾವಕಾಶವನ್ನು ಕೇಳಿ, ಸುಪ್ರೀಂ ಕೋರ್ಟ್‌ಗೆ ಒಂದು ಮನವಿಯನ್ನು ಸಲ್ಲಿಸಬೇಕು ಅಂತ ಏನು ಕೆಲವು ಮುಸ್ಲಿಂ ಸಮಾಜದ ಮುಖಂಡರುಗಳೆಲ್ಲಾ ಸೇರಿ ನನ್ನ ಗಮನಕ್ಕೆ ತಂದರು, ಅದರ ಮೇಲೆ ನಾವು ಕ್ಯಾಬಿನೇಟ್‌ನಲ್ಲಿ ತೀರ್ಮಾನ ಮಾಡಿ ಒಂದು ಲೆಟರ್‌ನ್ನು ನಾವು ಸುಪ್ರೀಂ ಕೋರ್ಟ್‌ಗೆ ನಮ್ಮ ಲಾಯರ್ ಮುಖಾಂತರ ಕೊಡುವುದರ ಮುಖಾಂತರ ಆ ಒಂದು ಸಂದರ್ಭದಲ್ಲಿ ಸುಪ್ರೀಂ ಕೋರ್ಟ್‌ನವರು ಏನು ತೀರ್ಮಾನ ಮಾಡಲಿಕ್ಕೆ ಹೊರಟಿದ್ದರು ಆಗ ನಾವು ಸ್ವಲ್ಪ ಕಾಲಾವಕಾಶವನ್ನು ಕೇಳಿ ಎಲ್ಲಾ ಪಕ್ಷಗಳ ಮುಖಂಡರುಗಳನ್ನು ಮುಂದಿನ ದಿನಗಳಲ್ಲಿ ಸಭೆಯನ್ನು ಕರೆದು ನಾವು ಅಲ್ಲಿ ಎಲ್ಲರೂ ಒಪ್ಪುವಂತಹ ಸೌಹಾರ್ದಯುತವಾಗಿ ಆ ಒಂದು ಸಮಸ್ಯೆಯನ್ನು ಬಗೆಹರಿಸುವಂತಾದ್ದಕ್ಕೆ ಕಾಲಾವಕಾಶವನ್ನು ನಾವು ಸರ್ಕಾರದ ವತಿಯಿಂದ ಕೇಳಿದ್ದೇವೆ. ಈ ಸಂದರ್ಭದಲ್ಲಿ ಸ್ಪಷ್ಟೀಕರಣ ಕೊಡಲು ಬಯಸುತ್ತೇನೆ.

ಶ್ರೀ ಎನ್. ಧರ್ಮಸಿಂಗ್ : ಕೇಸ್ ಏನಾಯಿತು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೇ ಜುಲೈವರೆಗೂ ಕೇಸ್ ಮುಂದಕ್ಕೆ ಹೋಗಿದೆ.

ಅಧ್ಯಕ್ಷರು : ಈಗ ಕಳಸಾ ಬಂಡೂರಿ ಬಗ್ಗೆ ಒಂದು ಹೇಳಿಕೆಯನ್ನು ಕೊಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) : ಕಳಸಾ ಬಂಡೂರಿ ನಾಲಾ ವಿಷಯದಲ್ಲಿ....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಕಳಸಾ ಬಂಡೂರಿ ಜೊತೆಗೆ ನಾನು ತಮ್ಮ ಗಮನಕ್ಕೆ ತರಬಯಸುವುದೇನಂದರೆ ಆ ತ್ಯಾಜ್ಯ ವಸ್ತುಗಳನ್ನೆಲ್ಲಾ ಗೋವಾ ಸರ್ಕಾರ ಹಾಕುತ್ತಿದೆ ಆ ಬಗ್ಗೆ ನಮ್ಮ ಕರ್ನಾಟಕ ಸರ್ಕಾರ ಅವರಿಗೆ ಇನ್ನೂ ಎಚ್ಚರಿಕೆ